ಬೆಳಸಲಿಗೆ ಕೃತಿ ಸಂಪುಟ 2

ಯಕ್ಷಗಾನ ಪ್ರಸಂಗಗಳು

ಮೊದಲ ಮುದ್ರಣ 1999.

ಇಟಗಿ ಕ್ಷೇತ್ರ ಮಹಾತ್ಮೆ

1984

ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ.

ಮರು ವಿನ್ಯಾಸ - ಎಸ್ಸೆಂ ಹೆಗಡೆ ಮುಂಡೂಸರ

ಪಾತ್ರ ವರ್ಗ

1. ಬ್ರಹ್ಮ 2. ಸರಸ್ವತಿ 3. ಈಶ್ವರ 4. ಪಾರ್ವತಿ 5. ಶಂಖಚೂಡ

6. ಮಾಲಿನಿ 7. ಅಗ್ನಿ 8. ಯಮ 9. ಬಲೀಂದ್ರ 10. ಮುಕ್ತಚೂಡ

11. ದೇವೇಂದ್ರ 12. ಶಚಿ 13. ಬೃಹಸ್ಪತಿ 14. ನಾರದ 15. ಮಹಾವಿಷ್ಣು

16. ಮಾಯಾವತಿ 17. ಸುತೀಕ್ಷ 18. ಜಾನಕಿ 19. ಭರತ 20. ರಾಮ

21. ಲಕ್ಷ್ಮಣ

ರಾಕ್ಷಸರು, ಬ್ರಾಹ್ಮಣರು, ಸ್ತ್ರೀಯರು, ಇತ್ಯಾದಿ

ಪೂರ್ಣ ಹಕ್ಕು

ಶ್ರೀ ಸುರೇಶ ಗಣಪತಿ ಹೆಗಡೆ ಬೆಳಸಲಿಗೆ

ಪೋ : ಗೋಳ್ಗೋಡ ತಾ : ಸಿದ್ದಾಪುರ (ಉ.ಕ) 581 355

ಯಕ್ಷಗಾನ

ಇಟಗಿ ಕ್ಷೇತ್ರ ಮಹಾತ್ಮೆ

ನಿವೇದನಂ

ಪ್ರಿಯ ಸಖರೋಜಾಗ್ರಗಣಪಾ
ಹ್ವಯರಿತ್ತಾ ಧಾರದೊಲಿದಗೈದೆನು ಕೃತಿಯಂ।
ಭಯಹರ ಭುವಿಗಿಳಿದಿಹಚರಿ
ತೆಯ ಪದ್ಯದಿ ರಾಮೇಶ್ವರ ಬಯಕೆಯ ತೆರದಿಂ॥

ಯಕ್ಷಗಾನ

ಇಟಗಿ ಕ್ಷೇತ್ರ ಮಹಾತ್ಮೆ

ಭಾಮಿನೀ

ಗುರು ಗಣಾಧಿಪ ವಾಣಿರಮೆಯುಮೆ। ಹರಿಹರ ಬ್ರಹ್ಮಾಮ ರಾದ್ಯರ। ನೆರಗಿ ಪಿತೃ ಮುನಿನಿಕರ ಕವಿಕುಲವರರ ಸನ್ನುತಿಸಿ।। ಧರಣಿಗುತ್ತಮ ಏನಿಸುವಿಷ್ಟಕ। ಪುರದ ರಾಮೇಶ್ವರನ ಚರಿತೆಯ। ಪರಮ ಭಕ್ತಿಯೊಳೆಕ್ಷಗಾನ ದೊಳೆರೆವೆ ಕನ್ನಡದಿ ।।೧।।

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಸೂತನುಸುರಿದ ನಿಖಿಲ ತೀರ್ಥ। ಕ್ಷೇತ್ರ ಮಹಿಮೆಯ ಕೇಳಿಮೌನಿ। ವ್ರಾತ ಶೌನಕ ಮುಖ್ಯ ರವಗೆವಿ। ನೀತ ರಾಗಿ।।೧।। ಶಂಖ ಚೂಡನ ದಾವ ನಿಷ್ಟಿಕ। ವಂಕುರಿಸಿತೆಂತಲ್ಲಿ ತ್ರಿಭುವನ। ಶಂಕರನ ನೆಲೆಯಾಯಿತದುರಾ। ಮಾಂಕಿತದಲಿ।।೨।। ಸೋಮ ನದಿಗೆಂತಲ್ಲಿ ಯುಗಮದ। ಸೀಮೆಯಾಯ್ತದ ಬಿತ್ತರಿ ಪುದೆನೆ। ಪ್ರೇಮದಿಂ ತೆಗೆದಪ್ಪಿ ತಸ್ಸು। ಯೌಮಿ ನುಡಿದಾ ।।೩।।

ಭಾಮಿನಿ

ಶೌನಕಾದ್ಯರು ಕೇಳಿರೊಂದಿನ। ಆನಳಿನ ಭವನೋಲಗಿಸುತಲಿ। ರಾಣಿ ಸುಮನಸವಾರ ಮೌನಿ ಸ್ತೋಮ ಮಧ್ಯದಲಿ।। ತಾನು ರಚಿಸಿದ ಸೃಷ್ಟಿ ವಿಭವವ। ಸಾನು ರಾಗದಿ ಬಣ್ಣಿಸುತ್ತಿರೆ। ವಾಣಿ ಪುಳಕಿತಳಾಗಿ ನುಡಿದಳು ಪ್ರಾಣಪತಿಗೆರಗಿ।।೧।।

ರಾಗ ಸುರುಟಿ ರೂಪಕ ತಾಳ

ನೀರ ವಿವರ। ಸಾರ ಮನವ। ಸೂರೆ ಮಾಡಿತು ।।ಪಲ್ಲ।। ಭೂರಿ ಸೊಬಗ ಹೀರುವಾ ವಿಚಾರ। ಮೂಡಿತು ।।ಅ.ಪ.।। ಪೊಡವಿ ಗೊಲಿದು ನಡೆದು ನಲಿದು। ಜಡಧಿಗಿಳಿವುದು। ಹೊಡೆವ ತೆರೆಯೊಳೊಡಲ ನಾದು। ತೊಡನೆ ಬರುವುದು।।ನೀರು।।೧।। ನಿನ್ನ ಮನವೆ ಎನ್ನದಾಗದೆನ್ನ ಲಾಗದು।। ಸನ್ನಿಹಿತ ಸಾಯಾಹ್ನ ನಾಳೆ ಮುನ್ನ ಸಾಗ್ವುದು।।ನೀರೆ।।೨।। ನಿನ್ನ ನಾಳೆಯನ್ಯ ಕಲ್ಪ। ವೆನ್ನರವನಿಗೆ। ಮುನ್ನ ಪೊರಡು ಚನ್ನವಲ್ಲೆ। ಆಹ್ನಿಕಗೆ ಮಿಗೆ।।೩।।

ರಾಗ ಕಾಂಬೋಧಿ ಝಂಪೆ ತಾಳ

ಆಯಿತದಕೇನೆನುತ ತೋಯಜೋದ್ಭವ ಸಭೆಯ। ಆಯತಿಕೆಯಲಿ ಬೀಳುಗೊಟ್ಟು।।
ಆಯತಾಕ್ಷಿಯ ಕೂಡಿ ಸಾಯಾಹ್ನ ಪೂರ್ವದಲಿ। ರಾಯ ಹಂಸವನೇರಿ ಪೊರಟು।।೧।।

ಥಟ್ಟನಿಳಿಯುತ ಲಖಿಲ। ಸೃಷ್ಟಿಯ ಚರಾಚರಸ। ಮಷ್ಟಿ ದ್ವಂದ್ವದ ಶೋಭೆಯನ್ನು। ನಿಟ್ಟಿಸುತಲಾನಂದ ವಟ್ಟು ಮುಂದೈ ತಂದು। ಮುಟ್ಟಿದರು ಪಡುವಣ ಬುಧಿಯನು॥೨॥ ಇಳಿವಿನನ ಹೊಂಗಿರಣ ಸುಳಿವ ಮುಂದಾನಿಲನ। ಸೆಳೆತ ಜಲಚರ ಮಿಥುನ ಮಿಲನ। ಕಳೆದುದಾತ್ಮಸ್ಥೈರ್ಯ ಕಳಚಿಕೊಂಡುದು ವೀರ್ಯ। ಕಳವಳಿಸಿ ಮುಳುಗಿದನು ಜಲನ॥೩॥

ಭಾಮಿನಿ

ಸ್ಖಲಿತ ತೇಜಸ್ಸಿದುವೆ ಶಂಖದೊ। ಳಿಳಿದು ಶಿಶುವಾಯ್ತಜನು ತಾ। ಮೈ ತೊಳೆದು ಸಂಧ್ಯಾ ವಿಧಿಯ ನೆಸುಗುತ್ತಿಳಿಯೆ ತಮ್ಮಗ್ರುವು॥ ಬೆಳೆದು ಬೃಹದಾಕೃತಿಯೊಳವನೀ। ತಳವು ಬಾಯ್ದೆರೆವಂತೆ ಬೊಬ್ಬಿಡು। ತಲಿ ತಡಿಗಡರ್ದಿವರಸೊಡಲಿಂಗಿಳಿಪೆ ತಾನೆನುತ ॥೧॥

ಕಂದಪದ್ಯ

ಮುಂಬರುವಸುರನ ಕಾಣುತ। ಲೆಂಬುವುದೇ ನಿದಕೆನ್ನುತಲಂಬುಜ ತನಯಂ। ತಿಂಬುದ ದಾರನು ನಾನಾ। ಕೆಂಬುದನರಿವೆಯ ಪೇಳ್ ಶತಹುಂಬನೆಯೆಂದಂ ॥೧॥

ರಾಗ ಭೈರವಿ ಅಷ್ಟತಾಳ

ನಾನು ನೀನೆಂದರೇನು। ನುಂಗುತ ಹಸಿ। ವಾನಿವಾರಿಸಿಕೊಂಬೆನು। ಮೇಣುಹೆಣ್ಣನು ಕೂಡು। ತಾನಂದ ಪಡುವೆನು। ಮಾಣೆಂದ ಮತಿಹೀನನು॥೧॥ ನಾ ನಿನ್ನ ತಂದೆ ಬೊಮ್ಮ। ಎನ್ನಯ ರಾಣಿ। ವಾಣಿಯೀಕೆಯು ನಿನ್ನಮ್ಮ। ಹೀನ ಬುದ್ಧಿಯ ಬಿಡು। ಶ್ವಾನಗು ಕಡೆಯಿದು। ಜ್ಞಾನಿ ನೀನಾಗು ತಮ್ಮ॥೨॥ ತಂದೆ ತಾಯೆಂದರೇನು। ಜ್ಞಾನವು ಕಂದ। ನೆಂದರೇನರಿಯೆ ನಾನು। ತಿಂದು ನಿನ್ನನ್ನು ಹೆಣ್ಣ। ಹೊಂದಿಸುಖಿ ಸುವೆನೆನೆ। ನೊಂದು ಮನದಿ ಬ್ರಹ್ಮನು ॥೩॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಕಂಡು ಸತಿ ಮರೆಗೊಂಡಳಾಣ್ಮಕ। ಮಂಡಲೋದಕವನ್ನು ಮೂರ್ಖನ। ಚಂಡಿಕೆಯ ಪಿಡಿದೆತ್ತು ತಿಳಿಸಿದ। ಗುಂಡಿಗೆಯಲಿ॥೧॥ ನೀಡಿತದು ನಿಖಿಲಾಂಗ ವಿದ್ಯೆಯ। ಜಾಡಕಂಪನ ಗೂಡಿ ತನುವಿ॥ ಡಾಡಿ ಪಾಡುತ ಬೇಡಿದನು ಕೈ। ಜೋಡಿಸುತಲಿ ॥೨॥ ತಂದೆ ತಾಯ್ಗಳ ನೀವು ತ್ರಿಜಗಕೆ। ಕಂದನಪರಾಧಗಳ ಮನ್ನಿಸಿ। ಮುಂದೆಯೆನ್ನಿರವೆಲ್ಲಿ ಕೃತಿಯೊ। ನೆಂದು ಬೆಸಸಿ ॥೩॥

ಭಾಮಿನೀ

ಎಂದ ನುಡಿಗಿನ ನಸ್ತಕಾಲದಿ। ಸಂಭವವು ಶಂಖದೊಳು ದೈತ್ಯಕ। ದಂಬ ಕರಸಾಗಾಳು ಧರ್ಮದಿ ಕಂಬು ಶಿಖನೆನಿಸಿ। ಎಂಬುತಜ ಮೈದೆಗೆದ ಖಳನು ತ್ರ। ಯಂಬಕನ ಒಲವಿಂಗೆ ಹಿಮಗಿರಿ। ಯಿಂಬಿನಲಿ ತಪಗೈದ ನಿಂದ್ರಿಯ ಸ್ತಂಭನವಗೈದು॥೧॥

ವಾರ್ಧಿಕ್ಯ

ಇರಲತ್ತ ಕೈಲಾಸ ವರಮಹಾಗಿರಿವಾಸ। ಪರಮೇಶರಜತವಿಷ್ಟರದಿಪಾರ್ವತಿ ಪ್ರಮಥ। ಪರಿವೃತಂ ವೈಭವದೊಳಿರುತೊಂದು ದಿನ ಮನದೊಳರಿತನೀಖಳನ ತಪವ॥ ಪರಮ ಕರುಣಾ ಸಿಂಧು ಪರಶಿವೆಯನೊಡಗೊಂಡು। ಭರದಿ ವೃಷ ವಾಹನಂಧರೆ ಗಿಳಿದು ಶಂಖನಂ। ಹರುಷದಿಂ ಮೈದಡವಿ ತೆರೆಕಣ್ಣ ನಿನಗೊಲಿದು ಹರಬಂದೆ ತಾನೆಂದನು॥೧॥

ರಾಗ ಮಧು ಮಾಧವಿ ತ್ರಿವುಡೆ ತಾಳ

ಕಂಡು ಪುಲಕೋತ್ಸಹದಿ ತನುವನು। ದಂಡದಂತೀಡಾಡಿ ದೈನ್ಯದಿ। ಮಂಡಿಯೂರಿದು ನುತಿಸೆ ಸಂತಸ। ಗೊಂಡು ಶಿವನು। ನುಡಿದನು॥೧॥ ಮೆಚ್ಚಿ ಬಂದಿಹೆ ಮಗನೆ ತವಮನ। ದಿಚ್ಛೆತಾರ್ಥವ ಬೇಡು ಕೊಡುವೆನು। ಮುಚ್ಚು ಮರೆಬೇಡೆಂದು ಶಶಿಧರ। ನೆಚ್ಚಿನಿಂದ। ನೋಡಿದ॥೨॥ ಕರವ ಜೋಡಿಸುತಸುರ ಸುರನರ। ರುರಗ ದನುಜಾಯುಧ ನಿರಾಯುಧ। ಸರುವ ತಿರ್ಯಕ್ ಶುಷ್ಕವಾದ್ರ್ರದಿ। ಮರಣ ಬರದ। ವರಪದ ॥೩॥

ಭಾಮಿನೀ

ಕರುಣಿಪುದು ತವ ಪಂಚಶಕ್ತ್ಯೋ। ತ್ಕರಿತ ಚಿನ್ಮಯ ಪ್ರಾಣಲಿಂಗವ। ತರಳನಿಗೆ ದಯಪಾಲಿಸೆನೆಗಿರಿ ತರಳೆಯಡ್ಡೈಸಿ॥ ಧರೆಯೊಳಮರತ್ವವನು ನಿನ್ನನು। ದುರುಳ ಪರ್ಯಾಯದಲಿ ಬೇಡುವ। ಸರುವಥಾ ಕೊಡಲಾಗದೆಂದಳು ವರನ ಕಾಲ್ಪಿಡಿದು॥೧॥

ರಾಗ ಭೈರವಿ ಏಕತಾಳ

ನುಡಿಯದ ಕೇಳುತ ಕಿನಿಸಿ। ಬರ। ಸಿಡಿಲೆನೆಖಳ ನಬ್ಬರಿಸಿ।ಕೊಡುವ ಕರವನಡ್ಡೈಸಿಚ ಯಶ। ಪಡೆವೆಯ ಶಂಕರನರಸಿ॥೧॥ ಕೊಡುವವರೇನೆನುತೆಲ್ಲ। ಕೈ। ಗಿಡುವರೆ ತಿಳಿದರು ಖುಲ್ಲ। ಮುಡಿಯದ ನಾವವನಿಲ್ಲ। ಹುಟ್ಟಡಗಿಸೆ ತಪಿಸುವರೆಲ್ಲ॥೨॥ ತೊಲಗತ್ತಲು ಹೆಮ್ಮಾಳಿ। ನೀ। ಲಲನೆಯೆ ಹರಗೆ ನಿವಾಳಿ॥ ಸಲಿಸದಿರನು ಶಶಿಮೌಳಿ।

ವರ। ಗಳಿಸುವೆ ನಾನಂದದದಲಿ॥೩॥

ರಾಗ ಘಂಟಾರವ ಅಷ್ಟತಾಳ

ಮೂಳಿಯೆಂಂದೆಯ ಕಾಲಾಂತರುದ್ರನ। ಮೂಲಶಕ್ತಿಯು ಖೂಳ ನಿನ್ನಯ। ನಾಲಿಗೆಯನೊಳ ಸೇದಿಕೊ॥೧॥ ಸುಟ್ಟು ಬೂದಿಯ ಸೊಟ್ಟುತಿರ್ದನು ಪತಿ। ಕೊಟ್ಟವಚನವ ಕೆಟ್ಟಿತಿಂದಿಗೆ। ದುಷ್ಟ ಬದುಕಿದೆಯಾದರು॥೨॥ ಮುಂದೆ ಎನ್ನಂದದದೊಂದು ಹೆಣ್ಣಿನ ಸ್ಪರ್ಶ। ದಿಂದ ಮೃತಿಯನು ಹೊಂದು ನಡೆಹೋ। ಗೆಂದು ಶಾವನಿತ್ತಳು॥೩॥

ಭಾಮಿನಿ

ನಡುಗಿ ಭಯದಲಿ ಶಂಖಚೂಡನು। ಮೃಡಮೃಡಾಣಿಯರಡಿಯೊಳುರುಳುತಚ ದಡಿಗತನ ವಾಯ್ತೊಲಿದು ಪೊರೆವುದು ಹುಡುಗ ತಾನೆಂದ॥ ಮಡದಿಯನು ಸಂತೈಸಿ ದಾನವ। ನೊಡಲ ನೇವರಿಸುತ್ತ ಲಘುಹರ। ನುಡಿದ ತೆರವರವಿತ್ತು ಧರ್ಮದಿ ನಡೆಯಬೇಕೆಂದ ॥೧॥

ರಾಗ ಭೈರವಿ – ಝಂಪೆ ತಾಳ

ಒಡನಾತ್ಮ ಲಿಂಗವನು। ತೊಡಿಸಿ ದನುಜನಗಳಕೆ। ನಡೆಸಕಲ ದಿತಿಸುತರ। ಪಡೆಯವೆರೆದಾಳು॥೧॥ ಬೆಚ್ಚದಿರು ಧರ್ಮವನು। ಹೆಚ್ಚಿಪನಕವು ನೀನು। ಅಚ್ಯುತನು ನಡೆಯೆಂದ। ಸಚ್ಚಿದಾತ್ಮಕನು॥೨॥ ಮಡದಿ ಸಹ ಮರೆಯಾದ। ದಡಿಗ ಹಮ್ಮಿಲಿ ತಾನೆ। ಮೃಡನಾದೆ ನೆಂದುಬ್ಬಿ। ಗುಡಿಗಟ್ಟಿ ಮನದಿ॥೩॥

ವಾರ್ಧಿಕ್ಯ

ಬಂದು ವಿಂಧ್ಯಾ ಮೂಲದೊಂದು ಸುಸ್ಥಳದಿ ಖಳ। ನಿಂದನೀ ವಾರ್ತೆಯರಿದೊಂದಾಗಿ। ಕರ್ಬುರರ। ವೃಂದ ಮುಕ್ಕೋಟಿ ಬರಲಂದೆ ಮಯನಂ ಬರಿಸಿ ಮಂದಿರಂಗಳ ನಿರ್ಮಿಸಿ॥ ಚಂದದಮರಾವತಿಯ ನಿಂದಿಪ ಹೊಳೆಲ್ಗೈಸಿ। ಇಂದ್ರನರ ಮನೆಯ ಪೆಸರಿಂದ ತಾನದ ಕರೆಸಿ। ಅಂದೆ ದಾನವ ದೈತ್ಯ ಮಂದಿ ಮುಕ್ಕೋಟಿಗರಸೆಂದೆನಿಸಿದಂ ಶಂಖನು॥೧॥

ರಾಗ ಕಾಂಬೋಧಿ – ಝಂಪೆತಾಳ

ಕರೆಸಿ ಮೇದೋಹೂತ ರೊರೆದಂತೆ ಶುಭದಿನದಿ। ಹರಿವಿಷ್ಟರವನೇರಿ ಖಳನು। ದುರುಳ ದುರ್ಮುಖ ಸುಮುಖ ನರಕ ಮುರಕಾದ್ಯರನು। ವಿರಚಿಸುತ।

ಸೇನಾನಿಗಳನು॥೧॥ ಧೂಮಾಕ್ಷ ಸಿಂಹಾಸ್ಯ ತಾಮ್ರಾಕ್ಷ ಭದ್ರಮುಖ। ಕಾಮಾಕ್ಷ ಕುಂಭ ಕಾದ್ಯರನು। ತಾವುದ ದೊಳಷ್ಟಕರ ನೇಮಿಸಿದ ಸಾಚಿವ್ಯ। ಕಾವುಂಹಾ ದಾನವೇಶ್ವರನು॥೨॥ ಸುರಸುಧರ್ಮವ ಮೀರಿ ಮೆರೆಯ ಲೆಮ್ಮಯ ಸಭೆಯು ನುರಿತ ವೇಶ್ಯಾ ಮೇಳಗಳನು॥ ಕರೆಸಿ ವೇದವ ಪಠಿಸೆ ವರಬೊಮ್ಮರಕ್ಕಸರು। ಬರಲೆಂದನಾ ಶಂಖಿಖಳನು॥೩॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ದನುಜ ಬಲವಿನಿತಿಹುದು ದಿನತೆರ। ನುಣಲುಡಲು ಮೈ ಸುಖಕೆ ವೆಚ್ಚಕೆ। ಧನವ ಸನಧಾನ್ಯಗಳ ದೋಚಿರಿ। ಮನೆ ಮನೆಯೊಳು॥೧॥ ತಡೆದವರ ಕಡಿದೊಗೆದು ಹರಯದ। ಹುಡುಗಿಯರ ನೆಳೆತಹುದು ತಪ್ಪಿದ। ಡಿಡೆನು ಜೀವದೊಳೆಂದು ಗುಡುಗುತ। ದಡಿಗಖಳನು॥೨॥ ಸೊಕ್ಕಿಹರು ಸುಮನಸರು ಬುಧಜನ। ವಿಕ್ರುತಿಹ ಹವಿಯಿಂದ ವಿಪ್ರರ। ನಿಕ್ಕುತೆಜ್ಞಾದ್ಧಿಗಳ ನಿಲಿಪುದು। ಘಕ್ಕನೆಂದ॥೩॥

ಭಾಮಿನಿ

ಕಾಲನಾಳೆನೆ ಪೊರಟು ದಾನವ। ಜಾಲವವನಿಯ ಕೊಳ್ಳೆ ಹೊಡೆಯುತ। ದಾಳಿಗೈದೆ ತಿಗಳನು ಯಜ್ಞವ ಧೂಳಿಪಟಗೈದು॥ ಪಾಲಕರ ತುಂಡರಿಸಿ ಹರೆಯದ ಬಾಲೆಯರ। ಧನ ಧಾನ್ಯ ವಖಿಲವ। ಮೇಳವಿಸಿ ಬಂದೊಡೆಯಗೊಪ್ಪಿಸೆ ತಾಳಿ ಖಳ ಮುದವ॥೧॥

ರಾ ಮಾರವಿ – ಏಕತಾಳ

ಕೇಳಿರಿ ಸೇನಾಪಾಲರು ಸಮರದಿ। ಮೂಲೋಕವ ಜಯಿಸಿ॥ ತೋಳ ಬಲವ ಮೆರೆದಾಳುವ ಮನ ನಿ। ಮ್ಮಾಲೋಚನೆ ಬೆಸಸಿ॥೧॥ ಜ್ಯೇಷ್ಠರು ನಾವು ಕನಿಷ್ಠನು ಸುರಪತ್ರಿ। ವಿಷ್ಟಪವಾಳುವನು। ಕುಟ್ಟಲು ಬೇಕಾದುಷ್ಟರನೆಂದನು। ಥಟ್ಟನೆ ದುರ್ಮುಖನು॥೨॥ ದನುಜರೆನುತ ಕಡೆಗಣಿಸುತ ಲೆಮ್ಮನು। ಕುಣಿವುದು ತ್ರೈಲೋಕ। ಹಣಿದೆಲ್ಲರ ಹೆಣನುವುದೆಯೆಮ್ಮಯ। ಘನವೆಂದನು ಸುಮುಖ॥೩॥ ಸುರನರ ಭುಜಗರ ಮುಂದು ತ್ರಿವಿಷ್ಟಪ। ದೊರೆ ನೀನಪ್ಪನಕ। ಪುರಹರನಿತ್ತಿಹ ವರಲಿಂಗಕೆ ಬೆಲೆ। ಇರದೆಂದನು ನರಕ॥೪॥

ಭಾಮಿನಿ

ಪ್ರಾಣ ಲಿಂಗವ ಪಡೆದು ನಾನೇ। ಸ್ಥಾಣುವಾಗಿಹೆಜನ್ಮವಿತ್ತಹ। ವಾಣಿ ವರನೊಲವುಂಟು। ನಿಮ್ಮಭಿಮಾನ ಮೇಣಿರಲು॥ ತ್ರಾಣಿಯೆನಗೇಣಿ ಯಾರು ತ್ರಿಜಗದ ಪ್ರಾಣಿಗಳು ನೊರಜ್ಜೆಸೆ ಹರಿಗೀ। ರ್ನಾಣ ಪತಿಗಳ ಹತಿಪೆನೆಂದಾ ದಾನವೇಶ್ವರನು॥೧॥

ರಾಗ ಘಂಟಾರವ - ಅಷ್ಟತಾಳ

ತರುಬಿ ಸೇನೆಯ ಪೊರವಂಟು ವಿಜಯಕೆ। ಧರೆಯ ನಾಲ್ದೆಸೆಯರಸರಖಿಲರ। ಧುರದಿ ಲೀಲಾಜಾಲದಿ॥೧॥ ಗೆಲಿದು ತೋಷದೊಳಿಳಿದು ಪಾತಾಳದಿ। ಉಳಿದವರ ತನ್ನೊಳಗುಗೊಳಿಸುತ। ಚಲಿಸಿ ಸುತಳದ ಸನಿಹದಿ॥೨॥ ನೆಲಸಿ ತನ್ನಯ ಬಲಕೆಂದ ನಖಿಲರು। ಬಳಲಿಹಿರಿ ಕೆಲ ಗಳಿಗೆ ವಿಶ್ರಮ। ಗೊಳುವುದೀಯೆಡೆಗೆಂದನು॥೩॥

ರಾಗ ಶಂಕರಾಭರಣ - ತ್ರಿವುಡೆ ತಾಳ

ದನುಜ ವಿಶ್ರಮಿಸಿರಲು ವೈರೋ। ಚನಿಯ ಪೌತ್ರೀಮಾಲಿನಿ। ವನವಿಹಾರಕೆ ಬಂದ ಳಬಲಾ। ಗಣವ ಕೂಡೀ॥೧॥ ಕೊಳದೊಳೀಜಾಡುತಲಿ ಕಚ। ಗುಳಿಯ ನಿಡುತ ನಲಿಯುತ। ಪುಳಕತನುವಿಂಗೊಸನ ಭೂಷಣ। ವಳವಡಿಸುತ॥೨॥ ಜನಿತ ಸಮುಫಲವನು ಗ್ರಹಿಸುತಲಿ। ವನಿತೆ ನಿವಹವಿರುತಿಹ। ವನಕೆ ಬೇಸರ ಗೆಳೆಯಲಲೆಯುತ। ದನುಜ ಶಂಖ॥೩॥

ಕಂದಪದ್ಯ

ಬಂದವನೀಕ್ಷಿಸಿ ದೂರದಿ। ಸುಂದರಿಯಳ ಮೈ ಮಾಟವನಸುರಂ॥ ಕಂದರ್ಪಾಂಗಸು ಮಾರುತ। ಬೆಂದು ವಿರಹದಿ ಮಿಡುಕುತೆಂದಂ ಮನದೊಳ್॥೧॥

ರಾಗ ಕಾಪಿ - ತ್ರಿವುಡೆ ತಾಳ

ನಾರಿಯೇನ್ ಸುಂದರಿಯೀಕೆ। ಮನ। ಸೂರೆಯಾಯಿತು ಸತ್ತೆನು ಮಾರನ ಶರಕೆ॥ಪ॥ ಕಂದುಗುರುಳೆ ಚಂದ್ರವದನೆ। ಆಹಾ। ಚಂದುಟಿ ಮೇಣ್ ಕುಂದ ಕುಟ್ಮಲರದನೆ। ಇಂದೀವರಾಯತ ನಯನೆ। ಮದ। ಸಿಂಧುರ ಸನ್ನಿಭವಹ ಮೃದುಯಾನೆ।ನಾರಿ॥೧॥ ದರ್ಪಣ ಕದಪಹಿ ವೇಣಿ। ಕಂ। ದರ್ಪನೆಂಬನ ಕಯ್ಯ ಧನುಭ್ರೂಯುಗಾನಿ॥ ಮುರ್ಪುರ ಮಥನನ ರಾಣಿ। ಗಿಲ್ಲ। ದಿರ್ಪ ಮಹಾಕರ್ಷ ಸೌಂದರ್ಯ ಶ್ರೇಣಿ॥ ನಾರಿ॥೨॥ ಕಂಬುಕಂಧರ ವೃಕನುದರ। ಕುಚ। ವೆಂಬೆರಡು ಪುಟ್ಟ ಬಂಗಾರಕುಧರ। ತುಂಬು ಜವ್ವನೆಯಂದ ಸಾರ। ಎನ್ನ। ಸ್ತಂಭಿಸಿ ತರಿವೆ ಯಾರೆಂಬ ವಿಚಾರ॥೩॥

ರಾಗ ಸಾರಂಗ - ತ್ರಿವುಡೆ ತಾಳ

ಯಾರು ನೀನೆಲೆ ಚದುರೆ। ಕಾಂಬರೆ ಮದ। ವೇರಿ ತಂಬಕ ಮದಿರೆ। ಯಾರ ನಂದನೆ ನೀನು ತೋರುವೆ ವಧುವಾಗಿ। ಸಾರಿದೇಕಿಲ್ಲ ನೀರೆ। ವಯ್ಯಾರೆ॥ಯಾರು॥೧॥

ರಾಗ ಶಂಕರಾಭರಣ - ಏಕತಾಳ

ಧೀರಬಲಿಯ ಪೌತ್ರಿಯಣುಗೆ। ಸಾರುವರು ಮಾಲಿನಿಯೆಂದೆನ್ನ। ವಾರಿ ಕೇಳಿಗಾಗಿ ಬಂದೆ। ಯಾರುನೀಪೇಳಣ್ಣ॥೧॥

ರಾಗ ಸಾರಂಗ - ತ್ರಿವುಡೆ ತಾಳ

ಅಣ್ಣನಲ್ಲವಿವಿಯಸೆನ್ನು। ದಾನವರಗ್ರ। ಗಣ್ಯ ಶಂಖಾಖ್ಯ ನಾನು। ಎನ್ನಯ ಪುರ ವೈಜ। ಯಂತದರಸಿಯಾಗು। ಕನ್ನೆ ನಾ ಬೇಡುವೆನು। ನಿನ್ನವನು। ಯಾರು॥೧॥

ರಾಗ ಶಂಕರಾಭರಣ - ಏಕತಾಳ

ಕಂಡ ಕಂಡ ಹೆಂಗಳೆಲ್ಲ। ಹೆಂಡಿರೆನುವ ಭಂಡ ನಿನ್ನ। ಕಂಡರೆನ್ನ ತಾತ ಪಿಡಿದು। ಮಂಡೆಯೊಡೆವ ತೊಲಗು॥೧॥

ರಾಗ ಸುರುಟಿ - ಏಕತಾಳ

ಹುಲು ಮೂಜಗ ಚದುರೆ। ಎನ್ನಯ। ತುಳಿತಕೆ ಬಲಿಯಿದಿರೆ॥ಒಲಿದಿಹ ವೀರನ ನಲಿಯುತ ವರಿಸದೆ। ಕಳೆಯೆ ಕಡೆಗೆ ಹಳಹಳಿಸುವೆ ನೀರೆ॥೧॥ ಎಂತಿರ್ದರೆಯೇನು। ಹೆಣ್ಣುಸ್ಪು। ತಂತ್ರಳೆ ಪೇಳ್ನೀನು। ಪಿಂತೆಂದುದು। ಮಕಿದಂತರಿಸದೆ ಬಲಿ। ಯಂತರ ಒಲಿಸಭ್ಯಂತರಗಯ್ಯೆನು॥೨॥

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಎನ್ನನೇಮವ ಮೀರಿ ಬದುಕುವ। ಗಣ್ಯರಾರೀರೇಳು ಲೋಕದಿ। ನಿನ್ನ ತಾತನ ಬೇಡೆನೆಂದಿಗು। ಹೆಣ್ಣಿಗಾಗಿ॥೧॥ ಬೇಡಿಕೊಂಬೆನು ನಿನ್ನವನೆ ಮನ। ಮಾಡಿ ಕೂಡಿದಡಾಯ್ತು ತಪ್ಪಿದ। ಡೀಡರಿದು ನಾಪಡೆವೆ ಕಾಣಿಕೆ। ಗೂಡಿ ನಿನ್ನ॥೨॥ ಬೇಡರಣ ಮತ್ತಾತ ಮುನಿದರೆ। ಚಾಡಚಾಸನ ಲಿಪಿಯ ತೊಡೆವನು। ಬೇಡಿ ಪಡೆಯೆಂದಿಗು ಸ್ವತಂತ್ರದಿ। ಮಾಡೆ ಮನವ॥೩॥

ಭಾಮಿನಿ

ಮುಗುದೆಯಿಂತೊರೆದೈದಲೊಂದೇ। ಜಗಿತದೊಳಗಡಗಟ್ಟಿ ದಾನವ। ವಿಗಡ ಪೊತ್ತೊಯ್ದವಳ ಶಿಬಿರವ ಹೊಗಿಸಲೀಕ್ಷಿಸುತ॥ ಲಗುಬಗೆಯೊಳೋಡುತ್ತ ಸಖಿಯರು। ನಗರ ರಕ್ಷಕ ಮುಕ್ತ ಚೂಡಗೆ। ದುಗುಡದಿಂ ಬಿನ್ನೈಸೆ ಕಿಡಿಗಳನುಗುಳಿ ನಯನದಲಿ॥೧॥

8

ರಾಗ ಶಂಕರಾಭರಣ - ಮಟ್ಟೆತಾಳ

ಹೀನನಾರೊನೋಳ್ಪೆನೆನುತ। ಸೇನೆಯೊಡನೆ ರಥವನೇರಿ। ತಾನುಜವದೊಳ್ಳೈ ದಿಸುರಿದ। ಬಾಣವೃಷ್ಟಿಯ।। ಕಾಣುತಿದರ ದುರ್ಮುಖಾಖ್ಯ। ತ್ರಾಣದಿಂದ ವಿಶಿಖ ತತಿಯ। ಸೋನೆಯೆರಚು ತೊಂದೆ ಕ್ಷಣದಿ। ಚೂಣಿ ಮುರಿದನು।।೧।। ತಡೆವುವನ ಮುಕ್ತಕೇಶ। ನುಡಿದನೆಮ್ಮ ಹುಡುಗಿಯನ್ನು। ತುಡುಕಿದ ಧಮನ್ಯಾರು ತೋರು। ಒಡಲ ಬಗೆವೆನು।। ಒಡಲ ಬಗೆವುದಾಯ್ತು ನಿನಗೆ। ಮಡಿವ ಸಮಯ ಸನಿಹ ಬಂತು। ತಡೆಯೆನುತ್ತ ಶಕ್ತಿಯಿಂದ। ಹೊಡೆದದು ಮುಗನು।।೨।।ಥಟ್ಟನದರ ಮುರಿದು ಹರಡು। ಜುಟ್ಟಿನಸುರ ಕೆರಳಿ ನಿಮ್ಮ। ಸಿಟ್ಟೊರಸುವೆ ತಾಳೆನುತ್ತ। ತೊಟ್ಟ ಶರವನು।। ಬಿಟ್ಟಡದರ ತರಿದು ಕ್ಷಣದಿ। ಕೆಟ್ಟ ಮುಖನು ಹುರಿಗಣೆಯಲಿ। ಇಟ್ಟೊಡದುವೆ ಬಂದು ಹಣೆಗೆ। ನಟ್ಟು ಮುಕ್ತನು।।೩।।

ಭಾಮಿನಿ

ತನುವ ಮರೆದೊರಗಿದನು ದುರ್ಮುಖ। ನನಿತು ಸೇನೆಯ ಸವರುತಿರಲಿದ। ನರುಹೆ ಚರರೋಡೆ ವೈರೋಚನಿಯು ವಿಭವದಲಿ।। ಘನತರಾಸ್ಥಾನದಲಿ ಗುರುಹಿರಿ। ಜನರೊಡನೆ ಹರಿಪಾದ ಕಮಲವ। ನೆನೆಯುತಿರಲ್ಕೆ ತಂದು ದೂತರು ದಣಿಯ ಪದಕೆರಗಿ।।೧।।

ರಾಗ ಮುರಾರಿ - ಏಕತಾಳ

ಕೇಳು ಕೇಳಯ್ಯ ಯೇಳ್ವ ಮಾತ। ಮೂರ್ಲೋಕಕ್ಯಾತ। ತಾಳಲಾರೆವು ಬಂದಾತ ನಾತ।।ಪಲ್ಲ।। ಪಾಳಯ ಸಹಸುತಳಾಲಯ ಹೆಮ್ಮದ। ತಾಳಿಸಿದನು ಶಂಖಾಳಕ ಧೂರ್ತ।।ಅ.ಪ.।। ನೀರಾಟಕೆನುತ ಪೋಗಿರ್ದ। ವರ। ಮಾಲಿನಿಯುಮ್ಮನೋರ ಶಂಕ್ಯಾನೆಂಬ ಕ್ರೂರ।। ಆರಿಸಿ ವೈದ ವಿ। ಚಾರವರಿದು ನಡೆ। ದ್ವೋರಿದ ಮುಕ್ತಕ। ಕಾರಿದ ರಕುತವ ಸಾರಿದರೆಲ್ಲರು ಸೋರಿಯ ಹೂರ।।

ರಾಗ ಭೈರವಿ ಅಷ್ಟತಾಳ

ಚರರೆಂದ ನುಡಿಯು ಕೇಳಿ। ವೈರೋಚನಿ। ಉರಿದೆದ್ದು ಕಿಡಿಯುಗುಳಿ। ಸುರನರೋರುಗರೆಲ್ಲ ನೊರಜೆನಗರಿತಿಲ್ಲಿ। ದುರುಳ ಮಾಡಿದನೆ ದಾಳಿ।।೧।। ದಡಿಗನ ಶಿರವೀಡಾಡಿ। ಒಂದಸ್ತ್ರದಿ। ಪಡೆಯ ಮುಕ್ಕಡಿಯ ಮಾಡಿ।। ಹುಡುಗಿಯ ಬಿಡಿಸದೆ ಬಿಡೆನೆಂದು ರೌದ್ರದಿ। ನಡೆದು ಮಾರ್ಬಲವ ಕೂಡಿ।।೨।। ಪರಚಕ್ರವನು ಸಂಧಿಸಿ। ಸನ್ಮೋಹನ। ಶರವ ಶಿಂಜಿನಿಗಿರಿಸಿ।। ಬರಸೆಳೆದಿಟ್ಟೆಲ್ಲರುರುಳಿಸಿ ತನ್ನಯ। ತರಳೆಯ

ವಶಗೊಳಿಸಿ॥೩॥

ಮಿನಿ

ಸುತೆಯ ಸ್ಯಂದನವೇರ್ಚಿ ಮೋಹನ। ಹತಿಗೆ ಧೃತಿಗೆಡದಿರ್ಪ ವೀರನ। ಸ್ಥಿತಿಯ ಕಂಡಚ್ಚರಿಯೊಳಿಂದಿವನತುಲ ಬಲನಹುದು॥ ಮತಿ ದುಡುಕು ಕುಲಕರ್ಮವೊಪ್ಪಿದ। ಸತಿಯ ಕೈಪಿಡಿಸುವುದೆ। ಹಿತವೆ।ನುತ್ತಿರೆ ಶಂಖ ಚೂಡನು ಖತಿಯೊಳಡ ಹಾಯ್ದು॥೧॥

ರಾಗ ಘಂಟಾರವ - ಅಷ್ಟತಾಳ

ಭೂರಿ ಮೊಸದಿ ನಾರಿಯ ವಶಗೈದು॥ ಸಾರುವವನೀ ಯಾರು ನಿನ್ನನು। ಹೀರುವೆನು ನಾದಿಟವಿದು॥೧॥ ಪೋರ ಎನ್ನ ವಿಚಾರಿಸ ಬಂದೆಯ। ನೀರಿನಾಟಕೆ ಸಾರಿದಣುಗೆಯ। ಚೋರ ನೀಕದ್ದೊಯ್ದೆಯ॥೨॥ ಕಳವು ಹಾದರಗಳನು ಗೈವವನಲ್ಲ। ಕಳಕೆ ನಿನ್ನನು ಸೆಳೆಯ ಗೈದಿಹ। ಚಳಕವಿದು ನೀ ಮರುಳೆಲಾ॥೩॥

ರಾಗ ಕೇದಾರಗೌಳ - ಅಷ್ಟತಾಳ

ಮಣಿವುದು ತ್ರಿಭುವನ ರಣಕೆನ್ನಸೆಳೆಯುವ। ಜುಣುಗ ನೀನಾರ್ಬಲಿಯ॥ ಕೆಣಕಿ ಜೀವಿಸುವವಜನಿಸಿಲ್ಲಗರ್ವದಿ। ಕಣೆಗೀಯದಿರು ತಲೆಯ॥೧॥ಶರಧಿಯ ಮಥನದಿ ಸುರಪನ ವಜ್ರಕೆ ಹರಣವಿತ್ತವನು ನೀನು॥ ಹರವರಲಿಂಗವ ಧರಿಸಿದ ವಿಧಿಜದು। ರ್ಧರ ಶಂಖಚೂಡ ನಾನು॥೨॥ ಧುರದೊಳಿಂದ್ರನ ಮದಮುರಿದು ತತ್‌ಪೀಠದಿ। ಮೆರೆದುದನರಿಯೆಯ ನೀನು॥ ಹರಿಹರ ವಿಧಿ ಕೃಪೆವೆರೆದ ತ್ರಿವಿಷ್ಟಪ। ದೊರೆಯೈಸೆ ಮುಂದೆ ನಾನು॥೩॥

ಭಾಮಿನಿ

ಬರಿದೆ ಗಳಹಲದೇಕೆ ನಿಲುಸಂ। ಗರದಿ ಕೆಡಹುತ ನಿಮಿಷ ಮಾತ್ರದಿ। ತರುಣಿಯನು ಕೈವಿಡಿವೆನೆಂದನು ಕೆರಳಿ ಶಂಖಾಖ್ಯ॥ ಪರಿಕಿಸುತ ಕುಲಬಲಕೆ ಧೈರ್ಯಕೆ। ಹರುಷವಾಂತಾ ಬಲಿಯು ನಗುತಲಿ। ಧುರವೆ ನಿನ್ನೊಡನೆನುತ ನೆಗಹುತ ತೆರಳುತಲಿ ಗೃಹಕೆ॥೧॥

ರಾಗ ಕೇದಾರಗೌಳ - ಝಂಪೆ ತಾಳ

ಪರಿವಾರಸಹ ಮನ್ನಿಸಿ। ಬಲಿರಾಯ। ತರಳೆಯಭಿಮತವ ಗ್ರಹಿಸಿ॥ ಇರಿಸೆಲಗ್ನವ ಭಾವಿಸಿ। ವರಶುಲ್ಕ। ಬರಲ್ಂದ ಶಂಖ ನೆನಸಿ॥೧॥ ಕೊಡುವೆ ನಾಮನವಾದುದ। ಸುತೆಗೆಂದು। ನುಡಿದು ಮದುವೆಯ ಮಾಡಿದ॥ ಹುಡುಗಿಯನು ಮೈದಡವಿದ।

ಧನಕನಕ। ಒಡವೆಯಮಿತವ ನೀಡಿದ॥೩॥

ಕಂದಪದ್ಯ

ಹರುಷದಿ ಶಂಖಂಬಲಿಪದ। ಕೆರಗುತ ನುಡಿದನುವಿಜಯಕೆ ಪೊರಟವನಿಹೆನಾಂ॥ ಮೆರೆವ ತ್ರಿಲೋಕದೊಳುಳಿದಿಹ। ಸ್ವರವಂ ಗೆಲುವರೆ ಕಳುಹೆನೆ ಹರಸಲು ಪೊರಟಂ॥೧॥

ರಾಗ ಕಾಂಬೋಧಿ - ಝಂಪೆ ತಾಳ

ಅತ್ತ ಸ್ವರ್ಗದೊಳಿಂದ್ರನಿತ್ತನೋಲಗ ಮೂ। ವತ್ತೂರು ಭೇದದನಿಮಿಷರ॥ ಮೊತ್ತ ಗುರುವರಸಚಿವ ಚಿತ್ರಸೇನಾಪ್ಸರೆಯು। ರೊತ್ತಿನಿಂದಲಿಹೊತ್ತಿ ಜಠರ॥೧॥ ಶಂಖದಾನವನಿಂದಾತಂಕವಾಯಿತು ಹವಿಗೆ। ಮುಂಕಾಣದಡಗಿಹರು ಬುಧರು॥ ಶಂಕರನ ವರದಿ ಜಗಕಂಕುಶನಸುರನದಕೆ। ಮುಂಕಾದೆವದಕೆ ಧೀವಿದರು॥೨॥ ದುರುಳನೆಂದಿಗು ಎಮ್ಮಪುರವ ಮುತ್ತದೆ ಬಿಡನು। ಹರಿಪುದೆಂತವನ ಪೀಡೆಯನು॥ ಹರಿಯೆ ಬಲ್ಲನೆನುತ್ತಮರುಗುತಿರೆ ನಾರದನು। ಸ್ಮರಿಸುತ್ಯೆತಂದ ಶೌರಿಯನು॥೩॥

ರಾಗ ಸಾಂಗತ್ಯ - ರೂಪಕತಾಳ

ಕಂಡು ಭಕ್ತಿಯೊಳಿದಿರ್ಗೊಂಡು ಮನ್ನಿಸುತಲಾ। ಖಂಡಲನಾಸನವಿತ್ತು॥ ಮಂಡೆ ಬಾಗುತ ಬ್ರಹ್ಮಾಂಡವ ಚಲಿಪ ಪ್ರ। ಚಂಡರೇನ್ ಸುದ್ದಿಯೀಹೊತ್ತು ॥೧॥ ಕೇಳು, ಧಿಷಣಕಷ್ಟ ಕಾಲವಾವರಿಸಿತು। ಮೇಲು ವರ್ಗದ ನಮ್ಮೆಲ್ಲರನು॥ ಕೇಳು ಶಂಖಾಸುರ ಪಾಳಯ ಪೊರಟಿದೆ ದಾಳಿಗಯ್ಯಲು ಸ್ವರ್ಗವನ್ನು॥ ಕಾಳಗದೊಳು ಕಾಲಕಾಲಗಂಜನು ಖೂಳ। ನಾಲೋಚನೆಯ ಪೇಳೆ ನೀನು॥ ತಾಳಲಾಪೆಯ ತವ ಲೋಲೆಯ ಬಯಸಿಹ। ಕೇಳದೆ ಮನವೆಂದೆ ನಾನು॥೩॥

ಭಾಮಿನೀ

ಕೇಳುತಿದ ನಡುಗಿದರು ದಿವಿಜರು। ತಾಳಿ ಮೂರ್ಛೆಯನಿಂದ್ರನೊಯ್ಯನೆ। ಏಳು ತುಕ್ಕಿದ ದುಃಖಶರಧಿಯೊಳಾಳಿ ವಿಸ್ಮೃತಿಯ॥ ದಾಳಿಯಲಿ ಗುಡುಗುಡಿಸುತೆನ್ನಯ। ಲೋಲೆಯನುಕೆಡಿಪವನ ಕಂಠವ। ಸೀಳದಿರೆ ತಾನೆಂದ ರೌದ್ರಾ ಭೀಳಮುಖನಾಗಿ॥೧॥

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಕೇಳಿರೈ ದಿಗಧಿಪರು ಸುಮನಸ। ಪಾಳಯವು ಸಹಿತೇಳಿ ಮಾರ್ಗದಿ ಖೂಳನಾಯುವ ತೊಡೆದು ಬರುವೆನು। ತಾಳಿದೃಢವ॥೧॥ ದನುಜ ಧನಮದಮತ್ತರಿಗೆ। ಪರ।

ವನಿತೆಯರಸಂಪದವ ದೋಚುವ। ಮನವದಲ್ಲದೆ ಪಾಪ ಪುಣ್ಯಗಳೆಣಿಕೆಯಿರದು॥೨॥
ಒಳ್ಳಿತೆಲ್ಲವು ತಮಗೆಯೆನ್ನುವ। ಖುಲ್ಲರನು ಮರ್ದಿಸುತ ಶಾಂತಿಯ।
ಸಲ್ಲಿಸುವುದಿಳೆಗೆನ್ನಪದವಿಗೆ ಸಲ್ಲಬಿರಿದು॥೩॥

ರಾಗ ದುರ್ಗಾ - ಏಕತಾಳ

ಅನಿಮಿಷೇಂದ್ರನ ಸುರಮುನಿ ತಡೆದೆಂದನು। ದನುಜನಿರವ ಬಲ್ಲೆಯನಿತುವ ನೀನು॥
ಕೆಣಕಿದಡಾತನ ರಣದೊಳುಜಯವಿಲ್ಲ। ಎನುತ ಸಾಗಿದ ಗುರು।
ವನುವರುಹಿದನು॥೧॥ ನಾಕ ಪಾಲಕನೆ ನೀನಾಕುಠಾರನ ಬಲ್ಲೆ।
ಶೋಕೋದ್ರೇಕದಿಮರೆ।ದೀಕೃತಿಗಿಳಿದೆ॥ ವಾಕಲಾಲಿಪುದವಿವೇಕ ಸಲ್ಲದು
ಸುರಾನೀಕದೊಡನೆ ಸ್ವರ್ಗಲೋಕವನುಳಿದೆ॥೨॥ ಮಾಚಿರೂಪವನು ಹಿಮಾಚಲ
ದೊಳಗಿರ್ದು।ಯೋಚಿಸಲರಿದು ಕಾರ್ಯಾಚರಣೆಯನು॥ ಬಾಚಿಕೊಂಡಾಪಷ್ಪ
ನೀಚಣ ಪೊರಮಡಿ। ಪೇಚಿವತಡೆದರೆ। ನೀಚ ದಾನವನು॥೩॥

ಭಾಮಿನಿ

ಗುರುನಿರೂಪವ ಕೇಳಿದಿವಿಜರು। ಮೆರೆದುಜವದಲಿ ಕೈಗೆ ಸಿಕ್ಕುದ। ಬರಗಿ
ಕೊಂಡೋಡುತಲಿ ಹಿಮವದ್ಗಿರಿಯ ಸೇರಿದರು॥ ದುರುಳ ಬಲದೊಡನೈದಿ ಶಂಕಾ।
ಸುರನು ಲಗ್ಗೆಯನಿಕ್ಕಿ ಸುಮನಸ। ಪುರದೊಳಾರಿಲ್ಲದುದಮಿಗೆ ಪಾಳ್ಸುರಿವ ಬೀದಿಗಳ
॥೧॥

ವಾರ್ಧಿಕ್ಯ

ನೋಡಿ ಹರುಷದಿ ಶಂಖಚೂಡ ಮನೆಮನೆಯರಸಿ। ಮಾಡಿ ಲೂಟಿಯ ಸುರರ
ಜಾಡನರಿಯದೆಯೆತ್ತ। ಓಡಿದರೊ ತಲೆಮರೆಸಿ ಹೇಡಿಗಳು ಸುಡಲೆನುತ
ಗಾಢದಖಿಲೈಸಿರಿಗಳ॥ಜೋಡಿಸಿ ಚತುಃಚಕ್ರಗಾಡಿಗಳ ತುಂಬಿ ನಿಜ।
ನಾಡಿಗಿಳಿಸುತದಿವದಿ ಖೋಡಿ ಕುಂಭನನಿರಿಸಿ। ಕೇಡಿ ಸರಿಸಮದಿ ಹೊಯ್ದಾಡುವಧಟನ
ಹುಡುಕಿ ಬೀಡಿಗೈದಿದನೀಶನ॥೧॥

ರಾಗ ಪಂಚಾಗತಿ - ಮಟ್ಟೆ ತಾಳ

ಕಂಡು ಪ್ರಮಥರ। ಹಿಂಡು ದನುಜರ॥ ದಂಡ ತಡೆಯೆ ಕಂಡನಸುರ ಗಂಡನ
ವದಿರ॥೧॥ ನೋಡುತಾಸ್ಯವ। ಮಾಡಿ ಹಾಸ್ಯವ॥ ಗಾಢನಗೆಯ ನಾಡುತಾಗ।
ಖೋಡಿದಾನವ॥೨॥ ವೀರಭದ್ರನ। ಹೇರಿ ಗಣಪನ॥ ಗಾರುಗೆಡಿಸೆ ತೋರಿದೆಡೆಗೆ।

ಸಾರೆ ಹರಗಣ॥೩॥ ಕೇಳಿ ರೀತಿಯ। ಶೂಲಿ ಖಾತಿಯ॥ಜ್ವಾಲೆಯಾಗಿ ಬರಲು ಖೂಳ। ತಾಳಿ ಭೀತಿಯ॥೩॥

ಭಾಮಿನಿ

ಹರನ ಪದಕಭಿನಮಿಸಿ ದೈನ್ಯದೊ।ಳೊರೆದ ವಿಜಯಕೆ ಪೊರಟು ತ್ರಿಜಗದಿ। ಧುರಸಮರ್ಥರು ದೊರೆಯದಿಲ್ಲಿಗೆ ಅರಿಯದೈತಂದೆ॥ಸರಸದಲಿ ಸಮದಂಡಿಯೆನಗಹ। ಉರುಬಲನ ತೋರ್ತೋ॑ಳತೀಟೆಯ। ಹರಿಸಿಕೊಂಬುವೆನೊಮ್ಮೆಗೆಂದನು ಕರವ ಜೋಡಿಸುತ ॥೧॥

ರಾಗ ಜಂಜೂಟಿ - ಅಷ್ಟತಾಳ

ಶಾಪವಿತ್ತಿಹಳಾರ್ಯೆ ನೀಪೋಷಿಸಿದೆಯದ। ರೂಪ ಬೇರಾದರೇನು॥ ಈ ಪೊಡವಿಯ ಜೀವವಾಪುದಿಲ್ಲ ಮರವು। ನಾಪೂರ್ಣವರಿತಿಹೆನು॥೧॥ ಸಾವಿಗಂಜುವನಲ್ಲ ಬಾವ ಬೇರೊಂದಿಲ್ಲ। ದೇವನಾಮಡಿದಲ್ಲಿಯೆ॥ ದೇವಿಯ ನೋಡಗೂಡಿ ಯಾವತ್ತೂ ಗಣಸಹ। ನೀವಿಹ ದಯೆಯಗಯ್ಯೊ॥೨॥ ಒಡಲು ಸಾರ್ಥಕ್ಯ ನಿತ್ಯ ಸುಡುಗಾಡು ವಾಸನೀ। ನೋಡಬಡಬೇಕೆನುತ॥ ಅಡಿಗೆ ಮುಡಿಯ ನಿಟ್ಟ ಮೃಡನಸ್ತೆಂದನು ಖಳ। ನಡೆದನು ನಗರಕತ್ತ॥೩॥

ಭಾಮಿನಿ

ಹಿಮಗಿರಿಯ ಕಂದರದ ಗುಹೆಯೊಳು ಸುಮನಸರು ದುಃಖಿಸುತ ದಿನಗಳ। ಸಮೆಸುತಿರೆ ಶಾಸ್ತಾರಖಳ ದುರ್ಗಮದ ವನದೊಳಗೆ॥ಅಮರಪತಿ ಗುರು ಸಚಿವದಿಗಧಿಪ। ಪ್ರಮದೆ ಶಚಿಸಹಿತಿರುತಲೊಂದಿನವಮಿತಚಿಂತೆಯೊಳೆಂದನಾ ಪೌಲಮಿಯನೀಕ್ಷಿಸುತ॥೧॥

ರಾಗ ಸೋಹನಿ - ರೂಪಕ ತಾಳ

ದಾನವಗಂಜುತಲೋಡಿದೆ। ರಾಣಿಯೆ ವನಕೀಡಾಡಿದೆ॥ ಹೀನನನೀಕ್ಷಿಸಬಹುದೆ। ಆನನವನು ಪ್ರಮದೆ।.೧॥ ಮರಣವ ನಳಿಸಿಹ ಶ್ರೀಶನು। ದುರುಳನ ತಾ ಕೊರಳರಿವನು। ಮರುಕಕೆ ಕಾರಣವೇನು। ಧರಿಸೈ ಧೈರ್ಯವನು॥೨॥ ಮೂಲೋಕದ ಸಿರಿಯೊಂದಿಗೆ। ಖೂಳನ ಕಾಮಪಿಪಾಸೆಗೆ। ಪೌಲಮಿನೀಬೇಕವಗೆ। ಬಾಳುವೆವೆಂತೆಲಗೆ॥೩॥

ರಾಗ ಶೋಕಗೌಳ - ಅಷ್ಟ ತಾಳ

ಪತಿಯೆಂದ ನುಡಿಕೇಳಿ ಕ್ಷಿತಿಗೆ ಮೂರ್ಛಿಸುತೆದ್ದು। ಸ್ಥಿತಿಯೇನುಮುಂದೆನುತ॥ ಪತಿತ

ಪಾವನಲಕ್ಷ್ಮೀ ಪತಿಯಲ್ಲ ದನ್ಯಳು। ಗತಿಯಿಲ್ಲೆಂದಲು ಬಾಗುತ॥೧॥ ನರದನುಜರಡೊಳ್ಳ ಹಿರಿದು ತಿಂದುದನೆಲ್ಲ। ಸುರಿಸಿ ಮರ್ದಿಸದಿರನು॥ ಹರಿಗಗೋಚರವಿಲ್ಲ ಬರುವನ್ನೆಗಭಿಮಾನ।ವಿರಿಸಿಕೊಂಡಿಹೆನೆ ನಾನು॥೨॥

ರಾಗ ನೀಲಾಂಬರಿ - ಏಕತಾಳ

ಹೆಣ್ಣು ಜನ್ಮವೆ ಸಲ್ಲದು। ಕಾಮುಕಗಂಡು। ಕಣ್ಣು ಶೋಷಿಸಿ ಕೊಲ್ವುದು॥ ಚಿನ್ಮಯ ದಯೆಯಗೈದು। ದೈತ್ಯನ ಕೊಂದು। ಎನ್ನ ಮಾನವ ಕಾಯ್ವುದು॥೧॥ ಅಡಗಿಹುದೆನಿತು ಕಾಲ। ಶೋಧಿಸಿಯೆನ್ನ। ಕೆಡಿಸದಿಹನೆ ದುರುಳ॥ ಕುಡಿದುಸಾವೆನೆಗರಳ। ಉಂಡಿಹ ಸುಧೆ। ಕೆಡಿಪುದದರ ತಿರುಳ॥೨॥

ಭಾಮಿನಿ

ನಿಧನಕೆಡೆಯಿಲ್ಲಕಟ ಬಾಳಿಗೆ। ಹದನವಾವುದೊ ಕಾಣೆ ಕುಡಿದಿಹ। ಸುಧೆಯೆ ವಿಷವಾಯ್ತೇನನೆಂಬೆನು ವಿಧಿಯ ದುಷ್ಕೃತವ॥ ಮದನ ಪಿತಗಿದು ಪ್ರೀತಿಯೇಯೆಂ। ದಧಿಕ ಶೋಕದೊಳುರುಳುತಿರೆ ಗುರು। ಪದುಮನಯನೆಯ ನೆಗಹುತೆಂದನು ಮಧುರ ವಚನದಲಿ॥೧॥

ರಾಗ ಕಲ್ಯಾಣಿ - ಅಷ್ಟತಾಳ

ತಾಳುಸ್ಥೈರಣೆಯುನಿಂದ್ರಾಣಿ। ಹೋಗಿ। ಹೇಳಿಕೊಂಡರೆ ಚಕ್ರಪಾಣಿ॥ ಖೂಳಶಂಖಾಸುರನಾಳುತನವ ಮೆಟ್ಟಿ। ಹೂಳುವ ವೈಕುಂಠ ಕೇಳಿರೆಂದನು ಜ್ಞಾನಿ।.೧॥ಪೊರಡಿರೆಂದಿಂದ್ರನ ನೋಡಿ। ಗುರು। ತೆರಳಿದನಖಿಲರಕೂಡಿ॥ ಭರದಿ ಸಾಗುತ ದುಗ್ಧಶರಧಿ ತೀರದಿ ನಿಂದು। ಹರಿಯ ಧ್ಯಾನಿಸಿದರು ಮರುಕದಿ ಹಾಡಿ॥೨॥

ಭಾಮಿನಿ

ಸಿರಿಗೆ ತವರೆಂದೆಂಬ ಗರ್ವದಿ। ಮೊರೆವ ಕ್ಷೀರಾರ್ಣವದ ಮಧ್ಯದ।ವರಮಹಾ ವೈಕುಂಠ ಪತಿಯಿರುತುರಗ ಶಯ್ಯೆಯಲಿ॥ ಅರಿತ ನೀಸುಮನಸರಗೋಳನು। ಚರಣ ಪಾರ್ಷದ ಲಕುಮಿಯರು ಸಹ। ಗರುಡ ವಾಹನನಾಗಿ ಪೊರಟನು ಶರಣವತ್ಸಲನು॥೧॥

ರಾಗ ನವರೋಜು - ಆದಿತಾಳ

ಬಂದನು ದಾನವದಮನ। ಮುದ। ದಿಂದ ವಿಹಂಗಮ ಗಮನ। ಇಂದಿರೆಯರಸ ಮುಕುಂದ ಶಿವಪ್ರಿಯ। ಚಂದದಿ ಸಜ್ಜನ ವೃಂದೋದ್ಧರಣ॥೧॥ ಪರಿಕಿಸುತ ಪುರುಹೂತ। ಶಚಿ। ಗುರುದಿಕ್ಪಾಲಕರು ಸಹಿತ॥ ಚರಣ

ಕಮಲದೊಳಗುರುಳಿವುಘೇಯೆನೆ। ಕರುಣದಿನೆಗಹಿ ಶ್ರೀ। ಹರಿನಸುನಗುತ॥೨॥
ಏನಯ್ಯ ಸುರನಾಥ। ದಿಗು। ಪಾಲರು ಪತ್ನಿ ಸಮೇತ॥ ಮೇಲೀಗುರುವನು ಮೇಳೈಸುತ ಬಂ।ದೂಳಿಗವೇನದ ಪೇಳೆನೆಮುಖಶತ॥೩॥

ರಾಗ ಕಾಂಬೋಧಿ - ಝಂಪೆ ತಾಳ

ಆಡಲೇನನು ಶಂಖ ಚೂಡ ಖಳಹರವರದಿ। ಈಡಿರಿದ ಮೂಜಗದ ಸಿರಿಯ॥ ಪಾಡುಕೆಟ್ಟಿತು ನಮ್ಮ ನೋಡಿಸಿದ ನೀಕೊಲೆಯ। ಮಾಡಿ ಪಾಲಿಸು ಸ್ವಾಮಿಧರೆಯ॥೧॥
ವಿಷ್ಣುಮಯ ಜಗವೆಂಬ ಶಿಷ್ಟನುಡಿ ಪುಸಿಯಾಯ್ತು ದುಷ್ಟಮಯವಾಯ್ತಖಿಲಲೋಕ॥ ಕುಟ್ಟಿ ದುರುಳನ ಜನಸಮಷ್ಟಿಯಂ ಪೊರೆಯನುತ। ಬಟ್ಟೆಗೊರಲಿದುದಮರಾನೀಕ॥೨॥

ರಾಗ ಮಧುಮಾಧವಿ - ತ್ರಿವುಡೆ ತಾಳ

ಕೇಳಿರೈ ಸುಮನಸರು ಧೈರ್ಯವ। ತಾಳಿರೈ ಖಳಶಂಖಚೂಡನ। ಸೀಳಿ ಸುರಸುಜನೌಘ ವಿಬುಧರ। ಜಾಲವನ್ನು॥ಪೊರೆವೆನು॥೧॥ ಹರಚಿತವು ಬೇರುಂಟು ವಧಿಸುವೆ। ದುರುಳರನು ನಡಿರೆಂದು ಕಳುಹುತ। ಹರಿಯು ನಾರದನನ್ನು ಕರೆಯಲು। ಭರದಿ ಬಂದ। ಎರಗಿದ॥೩॥

ಭಾಮಿನಿ

ಹರಿಯೆ ಕರೆದಿಹುದೇತಕೆಂಬುದ। ನರಿಯದಾದೆನು ದಯದಿ ವಿವರಿಸು। ಚರಣಕಿಂಕರಗೆಂದು। ನಾರದ ಮರಳಿ ಭಕ್ತಿಯಲಿ॥ ಶಿರವ ಚಾಚಿದ ಪದಯುಗದಿ ಶ್ರೀ। ವರನು ಕರುಣದಿ ನೆಗಹಿ ಪೇಳಿದ। ದುರುಳ ಶಂಖಾಸುರನ ಮಡುಹಲ್ಕಿರುವ ಕಾರ್ಯಗಳ॥೧॥

ರಾಗ ಸಾರಂಗ - ತ್ರಿವುಡೆ ತಾಳ

ಗೌರಿಯ ಶಾಪದೊಲು। ಸುಂದರ ಸುಕು। ಮಾರಿಯ ರೂಪದೊಳು॥ಪಲ್ಲ॥
ಸಾರುತಲಿ ಶಶಿವಾರಿ ಯುಗಮದ। ಭೂರಿ ಸನಿಹವ ಸೇರುತಲಿವಟ॥ ಭೂರುಹದ ಬಳಿಯಿರ್ಪನಲ್ಲಿಗೆ। ಕ್ರೂರನನು ಸೆಳೆ ಭಾರಿ ಜವದೊಳು॥ಅ.ಪ.॥

ಭಾಮಿನಿ

ಪೊರಟು ನಾರದ ವೈಜಯಂತಕೆ। ಹರನನುತಿಸುತ ಬರಲು ಕಾಣುತ। ಹರುಷದಿಂದಿರೆದ್ದು ಶಂಖಾಸುರನು ಕರವಿಡಿದು॥ ಕರೆದು ತಂದಾಸನವನಿತ್ತುಪ। ಚರಿಸಿ ತನ್ನಯ ಪುರಕಪೂರ್ವದಿ। ತೆರಳಿ ಬಂದಿಹ ಕಾರ್ಯ ಗೌರವವರುಹಬೇಕೆಂದ॥೧॥

ರಾಗ ಬೇಗಡೆ - ಅಷ್ಟತಾಳ

ಲಾಲಿಸ್ಯೈಖಳ ಸಾರ್ವಭೌಮಕನೆ। ಏನೆಂಬೆ ನಿನ್ನಯ। ಮೇಲುಮೆಯುನದ ಶಂಖಚೂಡಕನೆ।। ತಾಳಿರುವೆ ಹರಪ್ರಾಣ ಲಿಂಗವ। ಕಾಲಭೈರವ ನೀನೆ ತ್ರಿಜಗದ। ಮೌಲ್ಯ ಸಿರಿಯೊಶವಾಯ್ತು ಬೊಮ್ಮನ। ಬಾಲನಲ್ಲೈ ಕಾಣೆ ನಿನಗೆಣೆ।।ಲಾಲಿ।।೧।। ಊಣಯವದಿಲ್ಲನ್ಯ ಭಾಗ್ಯದಲಿ। ನಾಕೇಳಿ ಬಂದಿಹೆ। ಊನವಿರುವುದನೊಂದು ಭಾಗದಲಿ।। ನೀನಯೋನಿಜನ್ಯೆಸೆ ಪತ್ನಿಯ। ಯೋನಿಜೆಯೇ ಸರಿಯಲ್ಲ ದನ್ಯಥ। ಮಾನಿನಿಯರೆನಿತಿದ್ದರಾಥ್ಯತೆ। ಗೇನು ಬೆಲೆಯೆಂದೆಂಬರಿಳೆಯಲಿ।।ಲಾಲಿ।।೨।। ಜೋಡಿಗಾಣದೆ ನೋಡಿ ಬಂದಿಹೆನೊಂದು ಯುವಸತಿಯ। ಅಯೋನಿಜೆಯಮಾ। ತಾಡಿ ತಿಳಿದಿಹೆನವಳ ಸಂಗತಿಯ। ತಪವಗಯ್ಯುತ। ಕಾಡಿನೊಳಗೊಬ್ಬಾಕೆಯಿರುವಳು। ನೋಡಿದರೆ ನೀನವಳ ತನುಹೋ। ಗಾಡಿದರು ಬಿಡೆ ದೃಢವು ಯುವತಿಯ।।ಲಾಲಿ।।೩।।

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಭಾಪು ಮುನಿಪತಿ ಎನ್ನ ಜನ್ಮಪ್ರ। ತಾಪ ಸದ್ಗುಣ ರೂಪ ವೈಸಿರಿ। ಗಾಪವಳೆ ನುಡಿ ತಹೆನು ಭೂಧರ। ಚಾಪನಾಣೆ।।೧।। ಮಾನಿನಿಗೆ ಜೋಡಿಲ್ಲ ತ್ರಿಜಗದಿ। ವಾಣಿರಮೆಯುಮೆ ಶಚಿ ರತಿಯರಿಂ। ಗೇನು ಬೆಲೆಯವಳಿದಿರಿಗೆಂದನು। ಮೌನಿ ನಗುತ।।೨।। ಆದರವಳೆಲ್ಲಿಹಳೊ ಹೋಗುವ। ಹಾದಿ ಯಾವುದೊ ತಿಳಿಯದಾದೆನು। ನೀದಯದಿ ತಿಳುಹೆಂದನಾ ಕ್ರ। ವ್ಯಾದನೆರಗಿ।।೩।। ದನುಜಪತಿ ಕೇಳ್ದಂಡಕಾವನ। ಮುನಿಸುತೀಕ್ಷ್ಣಾಶ್ರಮದ ಸನಿಹದಿ। ಜನಿತ ಸೋಮನದೀ ತಟಾಕದಿ। ವನಿತೆಯಿಹಳು।।೪।। ಮುನಿಯ ಕಳುಹಿಸಿ ದನುಜ ತನ್ನಯ। ತನುವ ಸಿಂಗರಗೈದು ಪೊರಮಡು। ವನುವ ಕೇಳುತ ಬಂದು ತಡೆದಳು। ವನಿತೆಯವನ।।೫।।

ರಾಗ ಕಲ್ಯಾಣಿ - ಏಕತಾಳ

ಪೊರಟುದಿದಾವಲ್ಲಿ ಸ್ವಾರಿ। ಪ್ರಾಣಕಾಂತ।। ನಿನ್ನ।। ಅರಸಿಗೆನದ ಗುಪಿತಕಾರ್ಯ। ಪ್ರಾಣಕಾಂತ।।೧।। ಬಲವನುಳಿವದೇಕಾಂಗಿಯಾಗಿ। ಪ್ರಾಣಕಾಂತ।। ತನು। ಪುಳಕ ಸಾಲಂಕಾರನಾಗಿ। ಪ್ರಾಣಕಾಂತ।।೨।। ಆವಸತಿಯ ಬಯಕೆ ಮನದಿ। ಪ್ರಾಣಕಾಂತ।। ನಿನ್ನ। ಭಾವೆಯೆನಗೆ ಪೇಳು ದಯದಿ। ಪ್ರಾಣಕಾಂತ।।೩।।

ರಾಗ ಸುರುಟಿ - ಏಕತಾಳ

ಸರಿ ನಿನ್ನಯ ಊಹೆ। ಅನುಪಮ। ತರುಣಿಯ ನಾನು ತಹೆ। ಕೊರತೆಯ ತರೆ ನಿನಗಿರಲೀ ಭರವಸೆ। ಮರುಗದೆ ತೆರಳೆನ್ನರಗಿಣಿ ಪೊರಟಿಹೆ॥೧॥ ಯಾರವಳೆಲ್ಲಿಹಳು। ನುಡಿದವ। ರ್ಯಾರೈ ನೀ ಪೇಳು॥ ಯಾರ ತನುಜೆ ತಲೆಗೇರಿತೆ ಭ್ರಮ ಕೊರೆ। ದೋರಿತೆ ವಿವರಿಸು ನಾರಿಯಾದೆನ್ನೊಳು॥೨॥ ಯಾರಿಗು ಸುತೆಯಲ್ಲ। ದಿವ್ಯಶ। ರೀರೆಯು ಸಟೆಯಲ್ಲ॥ ನಾರದನರುಹಿದ ವಾರತೆ ಸಹ್ಯಾ। ಭೂರುಹ ಪ್ರಾಂತವು ನಾರಿಯಳಿಹ ನೆಲ॥೩॥

ರಾಗ ನೀಲಾಂಬರಿ - ಏಕತಾಳ

ಚಿತ್ತದೊಲ್ಲಭ ಲಾಲಿಸು। ಹೆಣ್ಣಲ್ಲವಪ। ಮಿತ್ತು ನಿನಗೆ ಭಾವಿಸು। ಚಿತ್ತಜಯ್ಯನ ಮುನಿಸು। ದೇವತೆಗಳ। ಒತ್ತಾಸೆಯದ ಗ್ರಹಿಸು॥೧॥ ನಾರದನೆಲ್ಲರಿಗೆ। ಬಹಿರಂಗ ಸ್ನೇಹ। ತೋರುವ ವಶ ಹರಿಗೆ॥ ಸಾರಲಲ್ಲಿಗೆ ಎನಗೆ। ವೈಧವ್ಯ ಮೃತಿ। ಬಾರದಿರದು ನಿನಗೆ॥೨॥ ಸೆರಗೊಡ್ಡಿ ಬೇಡುವೆನು। ಮಾಂಗಲ್ಯ ಭಾಗ್ಯ। ಕರುಣಿಪುದೆನಗೆ ನೀನು॥ ಹರನಿತ್ತ ಭೋಗವನು। ಉಂಬೆವು ಪೋಗಿ। ತೆರಬೇಡ ಪ್ರಾಣವನು॥೩॥

ರಾಗ ಭೈರವಿ - ಅಷ್ಟತಾಳ

ತರುಣಿ ನೀ ಮರುಗದಿರೆ। ಯಾರಿಂದಲು। ಮರಣವಿಲ್ಲೆನಗೆ ಧೀರೆ॥ ಸುರನರೋರುಗರೆಲ್ಲ ನೊರಜೈಸೆ ವೀರಗೆ। ಬರಿದೆ ನೀನಂಜದಿರೆ॥೧॥ ಹರಿಯಲ್ಲ ಬೊಮ್ಮನಲ್ಲ। ತ್ರಿವಿಷ್ಟಪ। ದೊರೆಯಲ್ಲ ತ್ರಿಜಗವಲ್ಲ। ಹರನೆ ಬಂದರುಗೆಲ್ಲ ವರಬಲವೆನಗುಂಟು। ಅರಿತು ನೀನಳುವೆಯಲ್ಲ॥೨॥

ಭಾಮಿನೀ

ಅರಸಿಯನು ಬೀಳ್ಕೊಟ್ಟು ದಾನವ। ರರಸ ಬಾಂದಳ ಪಥವನಡರುತ। ತ್ವರಿತ ಗಮನದಿ ಪೊರಟ ನಾರದನೊರೆದ ದಿಸೆಗಾಗ। ಸಿರಿಮನೋಹರನಿತ್ತ ಮಾಯಾ। ತರುಣಿಯಾಗುತ ಪಡುವಣ ಬುಧಿಯ। ಕರೆಯ ಘಟ್ಟದ ಸೆರಗಿಗಿಳಿಯುತ ಭರಿತ ಹರುಷದಲಿ॥೧॥

ರಾಗ ಮಧು ಮಲ್ಹಾರ - ತ್ರಿವುಡೆ ತಾಳ

ಸತಿ ಮೌಳಿಮಣಿ ಮಾಯಾವತಿ ಬಳಕುತಲಿ। ಪೃಥಿವಿ ನೋಯದ ಮೃದುಗತಿ ಯನಿಡುತಲಿ॥ ವಿತತ ಬಾಲಾದಿತ್ಯ ದ್ಯುತಿಯ ಬೀರುಲ್ಲಿ ಅತಿಜವ ದಿಂದಿಳಾಪಥದಿ ಸಾಗುತಲಿ॥ಪಲ್ಲ॥ ಮಥಿಸಿ ದಾನವ ಪತಿಯ ಧರ್ಮ। ಚ್ಯುತಿಯ ನಿಲ್ಲಿಸಿ। ಕ್ಷಿತಿಯ ಪೊರೆಯುವ॥ ಮತಿಗೆ ವ್ರತಿಯೊಲು। ಸತಿಯು ಕುಳಿತಳು। ಯತಿಗೆ ಪೇಳ್ದಾಯುತ

ಸ್ಥಳದಲಿ॥ ಸತಿ ಮೌಳಿಮಣಿ ಮಾಯಾ। ವತಿ ಬಳಕುತಲಿ॥ಅ.ಪ.॥

ಭಾಮಿನೀ

ದೈತ್ಯ ನಡೆಗೆದ್ದಮರಿ ಜಂಝಾ। ವಾತ ಕೆಂಧೂಳಡರಿದಿಗ್ದೆಸೆ। ಗಾತುದುಲ್ಕಾಪಾತ ಮಹದುತ್ಪಾತ ವಾಯ್ತಹದಿ॥ ಯಾತುಧಾನನು ಕಡೆಗಣಿಸುತದ। ನಾತುರ ದೊಳೈ ತಂದು ಸೋಮನ। ದೀ ತಟದೊಳಿಳೆ ಗಿಳಿಯುತಲಿ ಮಾಯಾ। ತರುಣಿಯಳನು॥೧॥

ರಾಗ ಶಂಕರಾಭರಣ - ಅಷ್ಟತಾಳ

ನೋಡಿದ। ಶಂಖಚೂಡ ಮಾನಿನಿಯನು। ನೋಡಿದ॥ಪಲ್ಲ॥ ನೋಡಿದ। ಮುದದೊಳೋಡಾಡಿದ ಉಬ್ಬಿನ। ಗಾಡಿದ। ಸ್ಮರಗನು। ನೀಡಿದ। ಮನದಿಮಾ। ತಾಡಿದ। ನಾರದ। ನಾಡಿದ ಚಲುವದ॥ ನೋಡಿದ॥ಅ.ಪ.॥ ಚಂದ್ರವದನೆ ದುಂಬೆಗುರುಳು। ಅರ। ವಿಂದನಯನ ಕಂಬುಗೊರಳು। ಬಹ। ಳಂದದ ಕಾಳಹಿ ಹೆರಳು। ಕರ್ಣ। ಬಂಧುರ ಕೋಕಿಲಗರಳು॥ ಆಹಾ॥ ಕಂದರ್ಪಧನು ಹುಬ್ಬು। ಚೆಂದುಟಿಯೆದೆಯುಬ್ಬು। ಸುಂದರಿಗೆಣೆಯಿಲ್ಲವೆಂದು ಸಂತಸದೊಳು॥೧॥ ಯಾರು ನೀ ನೆಲೆಗೆ ವಯ್ಯಾರಿ। ಜಗ। ಮೂರಕೆ ನಾನಧಿಕಾರಿ। ಕೆಟ್ಟ। ಮಾರಹೀರಿದನಸು ಮೀರಿ। ಈ। ಧೀರನ ಪೊರೆ ದಯದೋರಿ॥ ಸಾರಸಭವನ ಕುಮಾರನ ಯೋನಿಜ। ವೀರದೈತ್ಯಾಧಿಪ ವಾರಿಜೇಕ್ಷಣೆಯರಿ॥೩॥

ಭಾಮಿನಿ

ಸುರನರೋರಗದನುಜತಿರ್ಯಗ್। ವರಸೆ ಮೇಣಾಯುಧ ನಿರಾಯುಧ। ಒರೆವೆ ಸತ್ಯವಿದಾರ್ದ್ರಶುಷ್ಕೋತ್ಕರದಿ ಮೃತಿ ಬರದ॥ ಹರನವರವವನಾತ್ಮಲಿಂಗವ। ಧರಿಸಿ ಮೆರೆವ ಮಹೇಶನೆನ್ನನು। ವರಿಸಿ ಸುಖಿಸನವರತ ಹೃದಯೇಶ್ವರಿಯು ನೀನಾಗಿ॥೧॥

ಕಂದಪದ್ಯ

ದಾನವನಿಂತೆನೆ ಮಾಯಾ। ಮಾನಿನಿ ಕಂದೆರೆದಳ್ ಧ್ಯಾನವನಿಳಿಪೋಲ್॥ ಏನೊಂದರಿಯದಳಂದದಿ। ನೀನಾರಿಲ್ಲಿಗೆ ಬಂದಿಹುದೇನೆನಲೆಂದಂ॥೧॥

ರಾಗ ಕೇದಾರಗೌಳ - ಅಷ್ಟತಾಳ

ಜಾಡಜಾಂಬಕಿ ಶಂಖಚೂಡದೈತ್ಯೇಶ್ವರ। ಜೋಡಿಲ್ಲ ಮೂರ್ಜಗದಿ॥ ಕೂಡೆನ್ನ ನಾರದ ನಾಡಿದನೊಸಗೆಯ। ಓಡಿ ಬಂದೆನು ಜವದಿ॥೧॥

ರಾಗ ಕೇದಾರಗೌಳ - ಏಕತಾಳ

ಯಾರ ಶೋಣಿತ ಶುಕ್ಲಾಧಾರವಿಲ್ಲದ ದಿವ್ಯ। ನಾರಿ ಮಾಯಾವತಿಯು॥ ಮಾರನಯ್ಯನ

ಸೇರಲೀ ರೀತಿತಪವು ನೀ। ಸಾರಲ್ಲೆನಗೆ ಜೊತೆಯು॥೧॥ ಹರಿಯೊಬ್ಬರಣ ಹೇಡಿ ಶರಧಿಯೊಳಡಗಿಹ। ಧುರಧೀರರೆಮಗಂಜಿಯೆ॥ ವರಿಸೆನ್ನ ಸರಿವೀರರಿರರು ತ್ರೈಜಗದೊಳು। ಮರುಳಾಟವಿದ ತೊರೆಯೆ॥೨॥

ರಾಗ ಸಾಂಗತ್ಯ - ರೂಪಕ ತಾಳ

ಅಧಿಕ ಬಲಾನ್ವಿತಗಧಿಕಜ್ಞಾನಗಳಿರೆ। ಮುದವಾಂತುಕೂಡುವೆನಲ್ಲ॥ ಅದಕೆ ಮೂರೊಗಟ ನಿನ್ನಿದಿರು ಮಂಡಿಪೆ ನಾನು। ಅದಬಿಡಿಪೆಯ ಖಳನಲ್ಲ॥೧॥

ರಾಗ ತುಜಾವಂತು ಝಂಪೆ ತಾಳ

ಜಗವ ಮುಷ್ಟಿಯೊಳಿಟ್ಟ ವಿಗಡ ವಿಕ್ರಮಿಗೆ। ಒಗಟ ಬಿಡಿಸುವುದೊಂದು ಬಿಗುಹೆ ಪೇಳೆಮಗೆ॥ ಮುಗುದೆ ನೀನೆನಗಾಹ ಬಗೆಯ ಭರವಸೆಗೆ। ನಗು ನಗುತಲುತ್ತರಿಪೆ ನುಗಡಿಸಾ ಒಸಗೆ॥೧॥

ರಾಗ ಸಾಂಗತ್ಯ - ರೂಪಕ ತಾಳ

ಹುಟ್ಟು ಸಾವುಗಳಿಲ್ಲ ದೃಷ್ಟಿ ಗೋಚರವಲ್ಲ। ನಷ್ಟಲಾಭಗಳಿಲ್ಲೊಂದಿಷ್ಟು॥ ಸೃಷ್ಟಿ ತ್ರಿಕಾರ್ಯವ ನಿಷ್ಟದಿಗೈವ ವೈ। ಶಿಷ್ಟ್ಯವ ಪೇಳಿದೊಂದೊಗಟು॥೧॥

ರಾಗ ಸೌರಾಷ್ಟ್ರ - ತ್ರಿವುಡೆ ತಾಳ

ಕಾಣದೆಲ್ಲವು ಶೂನ್ಯವದರಿಂ। ದೇನು ಸಾಧ್ಯವು ಸಟೆಯದೊಗಟಿದು। ಜಾಣೆ ತೆಗೆತಗೆ ಕಪಟದುರುಳಿನ ನೇಣಿದೈಸೆ॥೧॥ ಸೋತೆಯೊಂದರೊಳಿಳೆ ಚರಾಚರ। ವ್ರಾತ ಚಂದ್ರಾದಿತ್ಯ ಪ್ರಮುಖಗ। ಳಾತುದೇನನು ಮಗುಳೆಯನ್ನಯ। ರೀತಿಯರುಹು॥೨॥ ಹೆಗ್ಗಳಿಕೆಯೇಕವನಿಯಖಿಲನಿ। ಸರ್ಗನಿಯಮವು ನೀನು ನೀನೇ। ಜಗ್ಗಡಿಸದಿದನೆಲ್ಲ ಬೆರೆಜಗ। ದುಗ್ಗಳನನು॥೩॥

ಭಾಮಿನಿ

ಸೋತೆ ಕೊನೆಗೂ ಜ್ಞಾನಿಯಲ್ಲವು। ಪೇತುಗನು ತೊಲಗೆನುತಮಾಯಾ। ಗಾಡಿ ತಪದೊಳು ನಿಲಲು ಖಳಮಾನಾತಿ ಹಾನಿಯಲಿ॥ ಖಾತಿಮಿಗೆ ಕಾಮಾತುರದಿ ಪಿಡಿ। ದಾತಳೋದರಿಯುಳನಲಂಗಿಸೆ। ಕೋಟಿ ಸಿಡಿಲಬ್ಬರವು ಮೊಳಗಿತು ಧಾತ್ರಿ ಕಂಪಿಸಿತು॥೧॥

ಕಂದ ಪದ್ಯ

ಥಟ್ಟನೆ ಖಳ ಕಣ್ಮುಚ್ಚಿದ। ರಟ್ಟೆಯೊಳಿಹ ಸತಿ ಕಾಳ್ಕ್ರ ಜಟ್ಟಿಗನಾದಳ್॥ ದೃಷ್ಟಿಯ ತೆರೆದತಿ ಹೇಸುತ। ಬಿಟ್ಟವನಂ ಮೈಯೊರಸುತ ಪಟ್ಟಚ್ಚರಿಯಂ॥೧॥

ರಾಗ ಭೈರವಿ - ಏಕತಾಳ

ನಾರಿಯ ಕಾಣದೆ ಖಳನು। ಖತಿ। ಯೇರಿ ಸುರಿಸಿ ಕಿಡಿಗಳನು।। ಯಾರೆಲೊ ಮನುಜೋಪಮನು। ಕೊಳೆ। ನಾರುವ ಶ್ವಾಪದ ಸಮನು।।೧।। ನಾರಿಯನಡಗಿಸಿ ನೀನು। ಬಡಿ। ವಾರವ ತೋರುವೆಯೇನು।। ಕಾರೊಡಲನು ಬಗೆದಾನು। ದಿಟ। ತೋರುವೆ ಶೈಮಿನಿಯನ್ನು।।೨।। ಭಂಗನೆ ಜಿಗಿದಾಭಟನು। ಹರ। ಲಿಂಗವ ಹರಿದು ಬಿಸುಟನು।। ಭಂಗಿಸಿ ನಿಮಿಷದಿ ನಾನು। ಲಯ। ದಂಗನೆಯನು ಕೂಡಿಪೆನು।।೩।।

ರಾಗ ಭೈರವಿ - ಅಷ್ಟತಾಳ

ಹರನಾತ್ಮ ಲಿಂಗವದು। ಔದುಂಬರ। ತರುಶಾಖೆಯೊಳುನಿಂದುದು।। ದುರುಳ ಕೆಂಡವಕಾರಿ ಕರಿಯನ ಕೊಲುವೆನೆಂ। ದೆರಗಿದನಸಿಯುಗಿದು।।೧।। ಕಸಿದದ ಮುರಿದಿಕ್ಕಿದ। ಜಟ್ಟಿಗ ದೈತ್ಯ। ರಸೆಯದ್ರಿತರುಗಳಿಂದ।। ಎಸಕದೊಳಿಟ್ಟರೆ ಮಿಸುಕದಾತನು ತಿರು। ಗೆಸೆದು ಘಾತಿಯ ಮಾಡಿದ।।೨।। ಘನನಿಯುದ್ಧದಿ ನಿನ್ನನು। ಕೊಲ್ಲವೆನೆಂದು। ದನುಜ ಮೂಯಾಮವನು।। ವನಚರನೊಳು ಕಳೆದನುವರಕೆದೆಗೆಟ್ಟು। ಮನದಿ ಶಂಕೆಯನಾಂತನು।।೩।।

ಭಾಮಿನೀ

ಹರಹರೇನಾಶ್ಚರ್ಯವೆನ್ನಲಿ। ಸುರನರೋರುಗದನುಜ ವರ್ಗದಿ। ಧುರಕೆ ನಿಂತವರಿಲ್ಲದಿಂದೀ ಕರಿಯ ಸಟೆಗೈದ।। ಹರಣ ತಲ್ಲಣ ಗೊಂಬುದಂತಃ ಕರಣ ಕಳವಳಿಸುವುದು ಬದುಕುವ। ತೆರನದಲ್ಲಿ ವಮನುಜನಲ್ಲೆಂದರಿವು ತಿಂತೆಂದ।।೧।।

ರಾಗ ಮಧು ಮಾಧವಿ - ಅಷ್ಟತಾಳ

ಯಾರಯ್ಯ। ನೀನು। ಯಾರಯ್ಯ।।ಪ।। ಯಾರಯ್ಯ ಜಟ್ಟಿಗ ವೀರಗಟ್ಟಿಗನು। ಸಾರಯ್ಯ ಸತ್ಯ ವಿಚಾರ ಗುಟ್ಟಿದನು।।ಅ.ಪ.।। ಧುರದೊಳೆನ್ನಿದಿರಿಲ್ಲ ಹರನನುಗ್ರಹವು। ಬರಿಯ ನಾಗರಿಕಗೆ ಬರದೀ ವಿಗ್ರಹವು।। ಹರಿ ಮಾಯಾವಿದನೆಂದು ಒರೆವುದು ಜಗವು। ಅರಿಯೆ ನೀನಾತನೆ ಇರಬೇಕು ನಿಜವು।।ಯಾರಯ್ಯ।।೧।। ಮರಣ ಕಂಜುವನಲ್ಲ ಸರಿಕುಲಬಲನುಹರಣವಗೊಂಡರೆ ಹರುಷಿಪೆ ನಾನು।। ಅರಿತಂತೆ ನೀನಿರೆ ಪರಮ ಪುರುಷನು। ಕರುಣಿಸು ನಿಜವನು ಚರಣ ಕೊಂದಿಪೆನು।।ಯಾರಯ್ಯ।।೨।।

ಭಾಮಿನೀ

ಶಂಕೆಯಿದ ಪರಿಹರಿಸು ಮುನ್ನಿನಶಂಖ ಚೂಡಕನಲ್ಲನಿನ್ನಯ।ಕಿಂಕರನೆನುತನಯ ದಿಹರಿಪದಪಂಕರುಹಕೆರಗೆ।। ಶಂಕರನಸಖ ನೊಲಿದುನಿಜರೂ।ಪಂಕರಿಸಿತೋರಿಸಿದ

ಲೋಕಭಯಂಕರಾಕೃತಿಯಡಗಿದುದು ಶ್ರೀಪಂಕಜೇಕ್ಷಣನ॥೧॥

ರಾಗ ಸಾವೇರಿ ಆದಿತಾಳ

ಸಿರಿವರನನು ನೋಡಿದ। ಹರುಷದಿ ಪಾದ। ಕುರುಳಿ ಸಂಸ್ತುತಿ ಮಾಡಿದ॥ಪಲ್ಲ॥ ಸರಸಿಜ ಭವತಾತ। ಸುರಮನು ಮುನಿ ಸ್ತೋತ್ರ। ಹರಮಿತ್ರಾಖಿಲಶಕ್ತ। ಸರುವ ಸ್ವತಂತ್ರ॥ಸಿರಿ॥ಅ.ಪ.॥ ಧರೆ ನಾಟ್ಯ ಮಂದಿರವು। ನೀನೇ ಸೂತ್ರ। ಧರ ಸಚರಾಚರವು। ಸುರನರಾದಿಗಳೆಲ್ಲ। ಬರಿಯ ಹಾಹೆಗಳು ಶ್ರೀ। ಹರಿ ನೀನು ಕುಣಿಸಿದ। ತೆರದಿ ನರ್ತಿಸುವವು॥೧॥ ಆದಿ ಮಧ್ಯಾಂತ ವರ್ಜ್ಯ। ನಿತ್ಯಾತ್ಮನೆ। ವೇದವೇದಾಂತ ವೇದ್ಯ। ಪಾದದರ್ಶನದಿಜ್ಞಾ। ನೋದಯವಾಯಿತು। ಸೀದುದ ವಿದ್ಯೆಯು। ನಾಧನ್ಯನೆಂದ॥ ಸಿರಿವರ॥೨॥

ರಾಗ ಮಧು ಮಾಧವಿ ತ್ರಿವುಡೆ ತಾಳ

ನೀಡು ಮುಕ್ತಿಯನೆಂದು ತನುವೀ। ಡಾಡಿ ಖಳಪತಿ ಬೇಡಿದನು ಹಂ। ದಾಡದಂದದಿ ಹೂಳು ತೊಡಲಿದ। ರೂಢಿಯೊಳಗೆ। ಕುರುಹಿಗೆ॥೧॥ ಇರಲಿ ನಿನ್ನ ಶಿಲಾಕೃತಿಯುಹರ। ನೊರೆದ ತೆರೆ ಬಹನೀ ಸ್ಮಶಾನದಿ। ಇರುವುದುಭಯರು ಹರಿಹರಾಂಕಿತ। ವೆರೆದು ಚಿರದಿ॥ ಮೋದದಿ॥೨॥ ಧಾತ್ರಿಯೊಳಗಿದು ಪುಣ್ಯ ಯಾತ್ರಾ। ಕ್ಷೇತ್ರವಾಗಲಿ ಕೈಬಲದೊಳಿಹ। ಸ್ರೋತ ತೀರ್ಥಗಳಾಗಲೆಂದ ವಿ। ನೀತನಾಗಿ॥ ದೈನ್ಯದಿ॥೩॥ ಹರಣದಾಸೆಗಳಿಲ್ಲವಘಹರ। ಹರನ ನುಡಿಹುಸಿಯಾಗದಂದದಿ। ಅರೆ ಹಸಿಯುಯಿಷ್ಟಿಕೆಯೊಳಾಯುಧ। ವಿರಿಸಿ ಶಿರವ। ನರಿಯುತ॥೪॥ ಕರುಣೆಗೈದೀಯುವುದು ಮುಕ್ತಿಯ। ಮರಳಿ ಮೀವರು ಮಸಣದಿಂದಲಿ। ಬರುವರಿಲ್ಲಿಯೆ ಮಿಂದುಕಾಣಲಿ। ಪರಮಪದವ॥ಮಾಧವ॥೫॥

ಭಾಮಿನೀ

ನುಡಿವುತಿಂತನುವಾಗಿ ಕದನಕೆ। ಗುಡುಗಿ ದಾರ್ಭಟೆಗವನಿಯದುರಿತು। ಒಡನೆ ಹರಿಯರ್ಧಾರ್ದ್ರದಿಟ್ಟಿಕ ಕಡಚಿ ಚಕ್ರವನು॥ ಮಡುಹಿ ದನುಜನ ಮೆಟ್ಟಿ ಬುವಿಯೊಳ। ಗಡಗಿಸುತ ಕುರುಪಿಡುತಪಕ್ಕದ। ಜಡದೊಳಾಯುಧವನ್ನು ತೊಳೆಯುತ ಗಡನೆ ಮೈದೆಗೆದ॥೧॥

ಕಂದಪದ್ಯ

ದಿನಮಣಿಯುದಯದಿ ಮರುದಿನ। ಮುನಿಪಸುತೀಕ್ಷ್ಣಾಶ್ರಮದೊಳು ಜನರೇಳುತ್ತಂ॥

ದಿನ ಕರ್ಮಾದಿ ತೊಡಗಿರೆ ವಟು। ಗಣ ಪೊರಮಡುತ ಸಮಿತ್ಕುಶವನು ತರಲೆನುತಂ॥೧॥

ರಾಗ ಕಲ್ಯಾಣಿ - ಅಷ್ಟತಾಳ

ಪೇಳಿದ ನಾಗೊಬ್ಬಮಾಣಿ।ಯಮ್ಮ। ಗೋಳ ಶಿವನೆಬಲ್ಲ ಕಾಣೆ॥ಊಳಿಗದಲಿಕ್ಷಣವೇಳೆ ಹೆಚ್ಚಾದರೆ। ತಾಳಿಕೊಳ್ಳನು ಮುನಿಜಾಲ ಚೂಡಾಮಣಿ॥೧॥ ತರಳರೊಂದಾಗಿ ಮುಂಬರುತ ಅತ್ತಿ। ಮರದೊಳೇನೋತೋರ್ಪುದೆನುತ॥ ತರುವೇರುತೊಬ್ಬಾತ ತರೆದೊಡ್ಡಗೋಲಿಯು। ಇರಲೆನಗೆನಗೆಂದು ಭರಿತವೋಡಾಡುತ॥೨॥ ಕೊಡೆನೆಂದು ಓಡಿದ ಮಾಣಿ। ಬಂದು। ಕೊಡಲದ ಕೈಗೊಂಡು ಮೌನಿ॥ ಮೃಡನಾತ್ಮಲಿಂಗವು ಪೊಡವಿಗಿಳಿಯಿತೆಂತೆಂ। ದೊಡನೆ ಭಾವಿಸಿ ದನುಕಡುದಿವ್ಯ ಜ್ಞಾನಿ॥೩॥

ರಾಗ ಸುರಟಿ ಏಕತಾಳ

ಅರಿತತಿ ಸಂತಸದಿ। ಲಿಂಗವ। ನಿರಿಸುತ ಸಂಪುಟದಿ॥ ಎರಗುತದಕೆ ಮುನಿಪರ ನಿಕರಕೆತಾ। ನೊರೆದನು ಮಹಿಮೆಯ। ಭರಿತೋತ್ಸಾಹದಿ॥೧॥ ದುರುಳ ಶಂಖಚೂಡ। ಕೊಂಡಿದ। ಧರೆಗಿಳಿಸಿದ ಮೂಢ॥ ಧರೆಮೂರನು ಗೋಗರೆಸುತ। ಲಳಿದನು। ದೊರಕಿದುದೆನಗೇನಿರುವುದೋ ಗೂಢ॥೨॥ ಹರಿಯೆಸೆದಿಹನಿಲ್ಲಿ। ತಾಧರೆ। ಗಿರಿಸುವ ಸಂಜ್ಞೆಯಲಿ॥ ಬರುವನದೆಂದಿಗೂ ಅರಿಯೆ ನಿರೀಕ್ಷೆಯೊ। ಳಿರುವೆನು ಹರನನು ಪರಿಪೂಜಿಸುತಲಿ॥೩॥

ಭಾಮಿನಿ

ಒರೆವೆಕಾಲಾಂತರದೊಳಿನಕುಲ। ದರಸುದಶರಥ ರಾಮ ಪಿತೃ ವಾಕ್ಕರಿಸೆ ವಿಪಿನಕೆ ಪೊರಟು ಸತಿ ಸೋದರರು ಸಹಿತಾಗಿ॥ ಇರುತಿರಲು ವರ ಚಿತ್ರಕೂಟದಿ। ಅರಿತು ಕಣ್ಣೀರಿಡುತ ಭರತನು। ಗುರುಜನರು ಸಹ ಬರುತಲಣ್ಣನ ಚರಣ ಕುರುಳಿದನು॥೧॥

ರಾಗ ಶಂಕರಾಭರಣ - ತ್ರಿವುಡೆ ತಾಳ

ಕಂಡು ಪ್ರೀತಿಯೊಳೆತ್ತಿ ಸಹಜನ। ಮಂಡೆಯ ನಾಘ್ರಾಣಿಸಿ॥ ಗಂಡುಗಲಿಯಳಲೇಕೆ ರಾಷ್ಟ್ರಕೆ। ಗಂಡವೇನು॥೧॥ ಶಿರದಿ ಜಟೆ ವಲ್ಕಲಗಳೇನೈ। ಪುರದಿಜನಕ ಕುಶಲನೆ॥ ತರಳ ಶತ್ರುಹ ನೇನಗೈವನು। ಕಿರಿಯನವನು॥೨॥ ಭರತ ಬಂಧು ಸ್ನೇಹವೆಂಬುದು। ಧರೆಗೆ ನಿರತವಾದರೂ॥ ಗುರು ಜನನಿ ಪರಿವಾರದೊಂದಿಗೆ। ಬರವಿದೇನೈ॥೩॥

ಕಂದ ಪದ್ಯ

ಎನುತೆಂಘುಲ್ವಹ ವಿನಯದಿ। ಜನನಿಯರಿಗೆ ಮೇಣ್ಗುರುಪದ ವನಜಕೆ ಮಣಿದಂ॥ ಕಣ್ಣೀರಿಳಿಸುತ ಭರತಂ। ಘನ ಸ್ನೇಹದಿ ಕೊರಳಪ್ಪುತ ಚಿನುಮಯಗೆಂದ॥೧॥

ರಾಗ ಭೈರವಿ - ಝಂಪೆತಾಳ

ನಿನ್ನನೇ ಕರೆಕರೆದು। ಅನ್ನಪಾನವನುಳಿದು। ಪುಣ್ಯ ಲೋಕಕೆ ಸಾರ್ದ। ಇನ್ನಿಲ್ಲ ಜನಕ॥೧॥ ಪುರಕೆ ಮೊನ್ನೆಗೆ ಬಂದು। ಪರಿಯರಿತು ಜೀವಂತ। ಮರಣ ಹೊಂದಿದೆನಣ್ಣ। ಬರಿದಾಯ್ತೆನ್ನಿರವು॥೨॥ ಜನಕಗುತ್ತರ ಕ್ರಿಯೆಯ। ನೆನಿತೆನಿತೊ ಪೂರೈಸಿ। ವನವಾಸ ಕೈ ತಂದೆ। ಮುನಿನಿಯಮ ವಾಂತು॥೩॥

ಭಾಮಿನಿ

ಕೇಳಿ ಸೀತಾರಾಮ ಲಕ್ಷ್ಮಣ। ರಾಳಿದರು ಶೋಕಾಂಬು ನಿಧಿಯಲಿ। ತಾಳಿ ಸ್ಥೈರಣೆಯನು ರಘೂದ್ವಹ ಮೇಲು ವೈದಿಕವ॥ ಕಾಲ ಕುಚಿತದಿ ಗೈದು ಸ್ನೇಹದಿ। ಬಾಲ ಭರತನನಪ್ಪಿ ಬಲ್ಲಿದ। ಪಾಲರಿಲ್ಲದ ಧರೆಯಗೋಳನು ಪೇಳಿ ಮಗುಳೆಂದಂ॥೧॥

ರಾಗ ಕೇದಾರ ಗೌಳ ಅಷ್ಟತಾಳ

ನಡೆಮಗುಸಾಕೇತ ಪೊಡವಿಗರಸನಾಗು। ಹಡೆದನವಾಕ್ಯಗಳು॥ ನಡೆಯಬೇಕೈಧರ್ಮಕೆ ಡರು ತಂದವರಿಲ್ಲ ಜಡಜಾಪ್ತವಂಶದೊಳು॥೧॥ ಹುಸಿಯಿದು ಹಡೆದಾತ ನುಡಿದುದಲ್ಲಣ್ಣರ। ಕ್ಕಸಿಕೈಕೆಯಾಡಿದುದು॥ಬಿಸಜಾಕ್ಷನೀಬಂದು ವಸುಧೆಯಪಟ್ಟವ। ಸಸಿನದಿಂದಾಳುವುದು॥೨॥ಒಡೆತನ ನಿನಗೆ ಮೇಣಡವಿಯು ಎನಗೆಂದು। ಜಡಜಸಂಭವಲಿದೆಯು॥ ಹಡೆದವ್ವೆಕೈಕೆಯ ನುಡಿನೆಪಮಾತ್ರವು। ಕೆಡುಕಾಡದಿರು ತಪ್ಪಿಯು॥೩॥

ರಾಗ ಮಧುಮಾಧವಿ ತ್ರಿವುಡೆ ತಾಳ

ಪೊಡವಿಪತಿ ನೀನಣ್ಣ ರಾಷ್ಟ್ರದ। ಧೃಢವು ಭಂಗವ ತಂದೆನಾದರೆ ।ಹಡೆದ ತಾಯಿಗೆ ತಪ್ಪಿದಧಮಗು।ಕಡೆಯುನಾನು॥ ಶ್ವಪಚನು॥೧॥ ಪಣೆಯಬರಹವಿದಲ್ಲಮುಪ್ಪಿನ।ಜನಕ ಹೆಣ್ಣಿನಬಲೆಗೆಸಿಲುಕಲು। ತೃಣವುಪರ್ವತವಾಯ್ತುಮತ್ತದ।ನೆಣಿಸಬೇಡ॥ಬಾ ಗಡ॥೨॥ ಹಿರಿಯಪ್ರಾಜಜ್ಞನ ಬಿಟ್ಟಕಿರಿಯನು।ಧರೆಯನಾಳುವುದಾವಧರ್ಮವು। ತರುಣೆಕುಲಜರಿಗರುಹು ನಾನಿರೆ। ಬರದಿದೆಲ್ಲ॥ಧೃಡದಲಿ॥೩॥

ರಾಗ ದೇವಗಾಂಧಾರ ಏಕತಾಳ

ವರುಷವುಹದಿನಾಲ್ಕುತ್ತರಿಸದಯೋಧ್ಯೆಗೆ।ಬರೆನುನಿಶ್ಚಯತಮ್ಮ।ಭರತಾಂಕಮರ್ಮ।। ಹಿರಿಯರಸಂತಪ್ಪ।ತರಳರೆಣಿಪುದಲ್ಲಪರಿಪಾಲಿಸುವುದುಭಯರಿಗುಸಧ್ಧರ್ಮ।।೧।। ಹಿರಿಯನಾದರುಮತಿ। ವಿರಳನಾಡಿದವಾಕಾ।ಚರಣೀಯವಲ್ಲವು ಪರಿಭಾವಿಸಣ್ಣ।। ಮರಣವಾದರು ಸರಿ। ಧರೆಯಾಳೆಶಪಥವು।ಕರುಣವಿರಿಸಿ ಬಂದು। ಪೊರೆಯೊ ನಾವು ಸುತರೇನೊತಮ್ಮ ।।ಖತಿಯ ತ್ಯಜಿಸು ಪೋಗು ಕ್ಷಿತಿಯಪಾಲಿಸು ಪ್ರಜಾ।। ತಾಯ್ಗಳನತಿ।ಹಿತದಿ ನೋಡೆಮ್ಮ।।೩।।

ಭಾಮಿನಿ

ನೀನಿರದ ಸಾಕೇತ ಸತ್ಸುತ।ರಾಣಿರಹಿತಗೃಹಸರೋರುಹ। ಹೀನಕೊಳ ರವಿಶೂನ್ಯ ಗಗನ ಸ್ಮಶಾನಕೆಣೆಯದನು।।ನಾನು ಪೊಗೆತವಪಾದುಕೆಯ ಕೊಡು। ಭಾನುಸಿಂಹಾ ನದೊಳಿರಿಸುತ।ಕ್ಷೋಣಿಯನುಪಾಲಿಸುವೆ ನಿಯಮದಿ ನೀನು ಬರುವತನಕ ।।೧।।

ಕಂದಪದ್ಯ

ಭರತಂ ವರುಷ ಚತುರ್ದಶ। ಮರುದಿನದಪರಾಹ್ನವೆ ಗಡು ಬರದುಳಿದರೆ
ನೀಂ। ಇರೆನಾಂಜೀವದೊಳೊಡಲಿದ ನುರುಹುವೆ ಚಿತೆಯಲಿ ದಿಟವೆಂದೆರಗಿದ
ಪದಕಂ।।೧।।

ರಾಗ ಕೇದಾರಗೌಳ ಅಷ್ಟತಾಳ

ಅನುಜನ ತೆಗೆದಪ್ಪಿದನುಜಾರಿ ತತ್ಪಾದ। ವನಜರಕ್ಷೆಯ ನೀಡಿದ।। ಕಣಗಳಿಗದನೊತ್ತಿ ಜನಕನಂದನೆಗೆ ಮೈ। ದುನ ಸಾಷ್ಟಾಂಗವ ಮಾಡಿದ।।೧।। ವೈದೇಹಿ ಹರಸುತ ಮೈದಗೆಂದಳು ನಿನ್ನ। ವಾಯ್ದೆ ಕಟ್ಟುಗ್ರವಿದು।। ಗೈದವಧಿಗೆ ಪಿಂದ। ಕೈದುವುದಾಗದೆ। ಹೋದರೆ ಕೇಡಹುದು।।೨।। ವನವದು ಮನೆಯಲ್ಲ ಎಣಿಕೆ ಸುಲಭವಲ್ಲ। ದಿನಮಾನ ಬೇರುಂಟಲ್ಲ।। ಇನಿಯನ ನುಡಿಗಿಲ್ಲ ವನುಮಾನ ಬಹೆವೆಲ್ಲ। ಚಣಮೀರೆ ಸಾವುದಲ್ಲ।।೩।।

24

ಭಾಮಿನಿ

ಆದ್ಯುಮಣಿ ಕುಲಭವರೆಮಗೆ ಸರಿ। ಯಾದ ಗಣನೆಯು ಸೌರಮಾನವು। ಐದು ಸಾವಿರದೊಂದು ನೂರೀರ್ರೈದು ದಿವಸಗಳು।। ಗೈದರಾಗದು ಚ್ಯುತಿಯನೆನ್ನುತ। ಲೈದಿದನು ತನ್ನವರ ಕೂಡುತ। ಮೈದೆಗೆದನಲ್ಲಿಂದ ಹರಿ ಸತಿ ಸೋದರನ ಸಹಿತ।।೧।।

ಕಂದಪದ್ಯ

ಘನತೇಜಸ್ವಿಯಗಸ್ತ್ಯಾ। ಖ್ಯನ ಪದದರುಶನಕೆನುತಾ ಇನಕುಲತನಯಂ।। ವನಿತೆ ಸಹೋದರರೊಂದಿಗೆ। ವನದಲಿ ಬರುತ ಸುತೀಕ್ಷ್ಣಕ ಮುನಿಪನ ಹೊರೆಗಂ।।೧।।

ರಾಗ ನವರೋಜು ಆದಿತಾಳ

ಕೇಳೈರಾಘುವರಾಮನಾ।ಪೇಳುವೆದೈತ್ಯವಿರಾಮ।।ಕೇಳದಿರನು ವಿಧುಮೌಳಿಯು ಸೇರಿಹ ।ಕಾಲಗತಿಯೊಳೆನ್ನಾಲಯಕಮಮ।।೧।।ಹರನ ಜ್ಯೋತಿರ್ಲಿಂಗ। ನೀ।ನರಿತಿಹೆ ನೀಲನಿಭಾಂಗ।। ಬರಹನೋಡಿಹೆತವ।ಕರಕಮಲಗಳಿಂದ।ಧರೆಗೆ ಪ್ರತಿಷ್ಠೆಯಕರಿಸಿಕೊಡೆಂದ।।೨।। ಜಿಷ್ಣುವದಲಾಲಿಸಿದ। ಪರ।ಮೇಷ್ಠಿಪಿತಯೋಚಿಸಿದ ।ಶಿಷ್ಟರೆಕೇಳಿಶಿವೇಷ್ಟಿಪೂರ್ವಕವೆಪ್ರ।ತಿಷ್ಠೆಯುಲೇಸೆಂದಿಷ್ಟವನರುಹಿದ।। ೩।।

ಭಾಮಿನಿ

ನಾಳೆ ಮಾರ್ಗಶಿರಸಿತಪ್ರತಿಪದಿ। ಮೇಲೆಪೌರ್ಣಿಮದಿಷ್ಟಿಮಿಗೆಶಶಿ।ಮೌಳಿ ಯಾದ್ರ್ರಾತಾರೆವಿಧುದಿನಮೇಲುನಡುಹಗಲು।। ಶೂಲಿಸ್ಥಾಪನೆಯೆಂದು ಋಷಿಗಳ। ಜಾಲವನು ಬರಿಸಿದಸುತೀಕ್ಷ್ಣನು। ಮೂಲಕರ್ಮವ ಸಾಗಿಸಿದ ರಘುಕುಲಲೋಲಹಸ್ತದಲಿ।।೧।।

ವಾರ್ಧಿಕ್ಯ

ಮರುವುದಯಶಂಖಾಖ್ಯನುರುಸಮಾಧಿಯಪಾರ್ಶ್ವ।ತಿರೆಶುಧ್ಧಿಯಂಗೈಸಿಹರನಿಷ್ಟಿ
ಪೂರೈಸಿ ।ಬರಲಿಕಭಿಜಿನ್‌ಸಮಯಹರವಿರತ್ನಗಳರಘುವರನಕೈಯಲಿಲಿಂಗವ।।
ಇರಿಸಿಜಾನಕಿಯಕರಸ್ಪರುಶದೊಡದನಿಳೆಗೆ । ಚಿರದಿಸಂಸ್ಥಾಪನೆಯಕರಿಸೆನಲ್
ರಾಮಭೂಸುರಮಂತ್ರಘೋಷದೊಳವರಮೂಡು ಮುಖವಾಗಿಧರೆಯಲಿ
ಪ್ರತಿಷ್ಠಿಸಿದನು.।।೧।।

ಭಾಮಿನಿ

ಸುರರುಸುಮುಮಳೆಗರೆದರಾರಘು। ತರಳರಸ್ತ್ರದೊಳಿಳೆಯಭೇದಿಸಿ। ಬರಿಸಿಗಂಗೆಯತರುತಲಭವನಶಿರದೊಳೆರೆಯುತಲಿ।। ವಿರಚಿಸಿದರರ್ಚನೆಯ ಮೇಣದು। ಹರಿಹರರನೆಲೆಯಾಗಿರಾಮೇ।ಶ್ವರನೆನಿಸಿತಾಲಿಂಗವಿಷ್ಟಿಕಪುರವು ನೆಲಸಾಯ್ತು।।೧।।

ಕಂದಪದ್ಯ

ಕಾಮಾರಿಯಸನ್ನಿಧಿಯೊಳು। ರಾಮವಶಂಕಾಲಕ್ಷ್ಮಣಸೋಮಚಕ್ರಾ।।ನಾಮಕಪಂಚಕವಾದವು। ತಾಮುದ್ಭವಿಸುತತೀರ್ಥಂಗಳ್ ಹೋಮಿಸಲಘುವಂ।।೧।।

ರಾಗಸೌರಾಷ್ಟ್ರತ್ರಿವುಡೆ ತಾಳ

ವಿಜಯವಿಷ್ಣುವುಬಲದಿಮಧ್ಯದಿ। ರಜತಪೀಠನುಕೆಲದೊಳುಮೆಗಣ।ವ್ರಜವದೊಂದೊಂಶವಾಯಡೆ। ಸೃಜಿತವಾಯ್ತು।।೧।। ರಾಮಬಲವಂದೆರಗಿಮುಮನಿಗಳ। ನೇಮವಾಂತ್ಯೆದುತಲಗಸ್ತ್ಯನ। ಧಾಮಕೈದಿದನೆಂದಸೂತನು।ಯೌಮಿಗಳಿಗೆ।।೨।।ಬರೆದೆನುತ್ತರಕನಡಸಿದ್ಧಾ। ಪುರದೊಳಿಹಬೆಳಸಲಿಗೆವಿಠ್ಠಲ। ತರಳಬುಧಗಣಪತಿಚತುರ್ದಶ। ಬರಹವಿದನು ।।೩।। ಧರೆಯಸುಜ್ಞಾಭಿಜ್ಞವೃಂದದ। ಚರಣಕರ್ಪಣೆಗೈದೆನಿದರನು।ಚರಿಪರೀಕ್ಷಿತವೀವ ರಾಮೇ।ಶ್ವರನುದಯದಿ।।೪।।

ಮಂಗಲ ಪದ್ಯ

ರಾಗ ಧವಳಾರ ಏಕತಾಳ

ಮಂಗಲಂ। ಜಯ। ಮಂಗಲಂ।।ಪಲ್ಲ।। ಮಂಗಲಜಯತುಮಹೇಶನಿಗೆ।ಮಂಗಲ ಜಯರಾಮನಿಗೆ।। ಮಂಗಲವಿಷ್ಟಿಕವಾಸಗೆ ಜಯ ಜಯಮಂಗಲನತಜನಪೋಷನಿಗೆ ।। ಮಂಗಲಂ।।

ಸಮಾಪ್ತ

ಟಿಪ್ಪಣಿಗಳು

ಇಷ್ಟಿಕಾಪುರವೆಂದರೆ ಸಿದ್ದಾಪುರ(ಉ.ಕ.) ತಾಲ್ಲೂಕಿನ ಇಟಗಿ

ತೀರ್ಥಪಂಚಕ -

೧ ಸೋಮತೀರ್ಥ- ಸೋಮನ ಪಾಪವುಶಿವನಿಂದತೊಳೆಯಲ್ಪಟ್ಟಜಲಾಶಯ.

೨ ಅಶಂಕಾತೀರ್ಥ- ಶಂಖ ಚೂಡನಶಂಕಾಪರಿಹಾರವಾದಲ್ಲಿಹರಿದಿದೆ.

೩ ಚಕ್ರತೀರ್ಥ - ಶ್ರೀಹರಿಯುಸುದರ್ಶನವನ್ನು ತೊಳೆದಸ್ಥಳ.

೪ ರಾಮತೀರ್ಥ - ರಾಮನ ಬಾಣದಿಂದ ಹುಟ್ಟಿದ್ದು.

೫ ಲಕ್ಷ್ಮಣತೀರ್ಥ - ಲಕ್ಷ್ಮಣನಬಾಣದಿಂದ ಹುಟ್ಟಿದ್ದು. ಈಗ ಇದರ ಕುರುಹು ಮಾತ್ರಇದ್ದು ಹುಗಿದು ಹೋಗಿದೆ.